

ಜೀವಿಕ

ಬಂಧನಮುಕ್ತ ಜೀವನ

ಜೀತ ವಿಮುಕ್ತಿ ಕರ್ನಾಟಕ

ಜೀವಿಕದ ನೆಲೆ ಸೆಲೆಗಳು

ಭಾರತ ಸಂವಿಧಾನ

ಪ್ರಸ್ತಾವನೆ

ಭಾರತದ ಜನರಾದ ನಾವು

ಭಾರತವನ್ನು ಒಂದು

ಸಾರ್ವಭೌಮ ಸಮಾಜವಾದಿ ಧರ್ಮಾತೀತ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ

ರಚಿಸಲು ಹಾಗೂ ಅದರ ಸಮಸ್ತ ನಾಗರಿಕರಿಗೆ:

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯ**;

ವಿಚಾರ, ಅಭಿವ್ಯಕ್ತಿ, ನಂಬಿಕೆ, ಧರ್ಮಶ್ರದ್ಧೆ ಮತ್ತು ಉಪಾಸನಾ **ಸ್ವಾತಂತ್ರ್ಯ**;

ಸ್ಥಾನಮಾನ ಮತ್ತು ಅವಕಾಶಗಳಲ್ಲಿ **ಸಮಾನತೆ**

ದೊರೆಯುವಂತೆ ಮಾಡಲು; ಹಾಗೂ

ವ್ಯಕ್ತಿಯ ಘನತೆಯನ್ನು ಮತ್ತು ರಾಷ್ಟ್ರದ ಏಕತೆಯನ್ನು ಹಾಗೂ ಅಖಂಡತೆಯನ್ನು ಖಾತ್ರಿಗೊಳಿಸಿ

ಅವರೆಲ್ಲರಲ್ಲಿ **ಸೋದರತ್ವ**

ವೃದ್ಧಿಗೊಳಿಸಲು ದೃಢಸಂಕಲ್ಪ ಮಾಡಿದವರಾಗಿ;

ನಮ್ಮ ಸಂವಿಧಾನ ಸಭೆಯಲ್ಲಿ

1949ನೇ ಇಸವಿ ನವೆಂಬರ್ ತಿಂಗಳ ಇಪ್ಪತ್ತಾರನೇ ಈ ದಿನ ಈ ಮೂಲಕ

ಈ ಸಂವಿಧಾನವನ್ನು

ಅಂಗೀಕರಿಸುತ್ತೇವೆ, ಜಾರಿಗೊಳಿಸುತ್ತೇವೆ ಮತ್ತು ಆತ್ಮಾರ್ಪಿಸಿಕೊಳ್ಳುತ್ತೇವೆ.

ಸಂವಿಧಾನ ದಿನ 26 ನವೆಂಬರ್

ಅಂಬೇಡ್ಕರ್ ಜಯಂತಿ –ಘನತೆ ದಿನ - ಸಾಮರಸ್ಯ ದಿನ 14 ಏಪ್ರಿಲ್

ಜೀತ ನಿರ್ಮೂಲನೆಗೆ ಪಣತೊಟ್ಟಿರುವ

ಜೀವಿಕ – ಜೀತ ವಿಮುಕ್ತಿ ಕರ್ನಾಟಕದ

ಉಗಮ – ಬೆಳವಣಿಗೆಗಳ

ಮೂಲ ನೆಲೆ–ಸೆಲೆಗಳು

ಕಿರಣ ಕಮಲ ಪ್ರಸಾದ

Jeevikada Nele Selegalu, based on : Kiran Kamal Prasad, Apparent Harmony Disturbed by Affirmation of Human Rights, in Religion and Society, Vol. XXXV, No.2, June 1988

ಜುಲೈ 13, 2017

ಪ್ರತಿಗಳು : 10,000

ಪ್ರಕಾಶಕರು : ಜನಜಾಗೃತಿ ಪ್ರಕಾಶನ,
1289/4, ಐಸೆಕ್ ರಸ್ತೆ, ನಾಗರಭಾವಿ, ಬೆಂಗಳೂರು - 560072
ದೂರವಾಣಿ : 080-23214214

ಬೆಂಬಲ ಬೆಲೆ : ರೂ. 20/-

ಚಿತ್ರಕಲೆ ಮತ್ತು ಲೊಗೊ : ಜಾನ್ ದೇವರಾಜ್
ಮುಖಪುಟದ ವಿನ್ಯಾಸ : ಅನುಗ್ರಹ ಕೆ. ಶರ್ಮ

30 ವರ್ಷಗಳ ಹಿಂದೆ ಒಂದು ಊರಲ್ಲಿ ನಡೆದ ಘಟನೆಗಳ ಅನುಭವದಲ್ಲಿ
ಕಿರಣ ಕಮಲ ಪ್ರಸಾದರು

ಜೀತಪದ್ಧತಿಗೂ ಜಾತಿ ವ್ಯವಸ್ಥೆಗೂ ಇರುವ ಸಂಬಂಧವನ್ನು ಪ್ರಸ್ತಾಪಿಸುತ್ತಾ ಈಗಲೂ ಜಾತಿವಿನಾಶದ ಭಾಗವಾಗಿ ಜೀತನಿರ್ಮೂಲನೆಯ ಅವಶ್ಯಕತೆಯನ್ನು ಸ್ಪಷ್ಟಪಡಿಸುತ್ತಾರೆ.

ಪೀಠಿಕೆ

"ಈ ಊರಲ್ಲಿ ಎಷ್ಟು ಮಂದಿ ಜೀತದಾಳುಗಳಿದ್ದಾರೆ?" ಎಂದು ನನ್ನನ್ನು ಕೇಳಿದ್ದು **1987ರ ಆಗಸ್ಟ್ 19ರಂದು** ಆನೇಕಲ್ ತಾಲೂಕಿನ ಸರ್ಜಾಪುರ ಬಳಿಯ ಹಂದೇನಹಳ್ಳಿಯಲ್ಲಿ ಬೆಂಗಳೂರು ಜಿಲ್ಲೆಯ ಆಗಿನ ಎಸ್.ಪಿ. ಆಗಿದ್ದ ಶ್ರೀಮತಿ ಪ್ರಭಾ ರಾವ್‌ರವರು. ನನ್ನನ್ನು ಅವರು ಆ ಪ್ರಶ್ನೆ ಕೇಳುವ ಸಂದರ್ಭ **ಆಗಸ್ಟ್ 11ರಂದು** ಮಧ್ಯಾಹ್ನ 2-3 ಗಂಟೆ ಹೊತ್ತಿಗೆ ಆ ಊರಿನ ಬಲಿಷ್ಠ ವರ್ಗದವರು ಗುಂಪು ಸೇರಿ ನನ್ನನ್ನು ಆ ಊರಿನಾಚೆ ತಳ್ಳಿಕೊಂಡು ಹೋಗುತ್ತಾ ನನ್ನ ಮೇಲೆ ದೌರ್ಜನ್ಯ ಎಸಗಿದ್ದ ಘಟನೆಯ ಮೂಲಕಾರಣಗಳನ್ನು ವಿಚಾರಿಸಿ ಸಮಸ್ಯೆಯನ್ನು ಅರ್ಥಮಾಡಿ ಪರಿಹಾರ ಸೂಚಿಸುವುದಾಗಿತ್ತು; ಕಾನೂನು ಪ್ರಕಾರ ನ್ಯಾಯ ಒದಗಿಸುವ ಸಲುವಾಗಿ ವಿಚಾರಣೆ ನಡೆಸುವುದಾಗಿತ್ತು. ಆ ವಿಚಾರಣೆ ನಡೆಸುವ ಆರಂಭದಲ್ಲಿ ನಾನು ಆ ಊರಲ್ಲಿ ಇದ್ದದ್ದು ಏಕೆ, ಯಾವಾಗಿನಿಂದ, ಅಲ್ಲಿದ್ದು ನಾನೇನು ಮಾಡುತ್ತಿದ್ದೆ ಎಂದು ನಾನು ವಿವರಿಸಲು ತೊಡಗಿದಾಗ ನನ್ನ ವಿವರಗಳಿಗೆ ಲಕ್ಷ್ಯ ಕೊಡದೇ ಒಮ್ಮೆಲೇ ಆ ಪ್ರಶ್ನೆಯನ್ನು ನನಗೆ ಕೇಳಿದ್ದರು. ಅದಕ್ಕೆ ಉತ್ತರವಾಗಿ "ಜೀತಪದ್ಧತಿ ಒಂದು ಸಾಮಾಜಿಕ ಪಿಡುಗಾಗಿ ಭಾರತದ ಹಳ್ಳಿಗಳಲ್ಲಿರುವುದು ನನಗೆ ಗೊತ್ತು. ಆದರೆ ಆ ಸಮಸ್ಯೆಯನ್ನೊಳಗೊಂಡಂತೆ ದಲಿತರ ಇತರೆ ಯಾವುದೇ ಸಮಸ್ಯೆಯನ್ನು ನಾನು ಇಷ್ಟರ ವರೆಗೆ ಎತ್ತಿಕೊಂಡಿಲ್ಲ. ಆದ್ದರಿಂದ ಆ ಊರಲ್ಲಿರುವ ಜೀತಪದ್ಧತಿಯ ವಾಸ್ತವ ಚಿತ್ರ ನನಗೆ ಗೊತ್ತಿಲ್ಲ. ಆದರೆ ಅದರ ಬಗ್ಗೆ ಆದಷ್ಟು ಬೇಗನೆ ತಿಳಿದುಕೊಂಡು ನಿಮಗೆ ತಿಳಿಸ ಬಲ್ಲೆ" ಎಂದು ನಾನು ಅವರಿಗೆ ಆಗ ಆಶ್ವಾಸನೆ ಕೊಟ್ಟೆ.

ನನಗೆ ತುಂಬಾ ಹತ್ತಿರವಾಗಿದ್ದ ಮತ್ತು ಹಂದೇನಹಳ್ಳಿಗೆ ಹೋದಾಗಿನಿಂದಲೂ ನನ್ನ ಕಣ್ಣುಕಿವಿಯಾಗಿದ್ದ ಕೆಲವು ಯುವಕರಲ್ಲಿ ಒಬ್ಬರಾಗಿದ್ದ ಮುನಿಯಪ್ಪ (ಹಂಬು)ರವರು ಕೆಲವೇ ದಿನಗಳಲ್ಲಿ ಒದಗಿಸಿದ್ದ ಹಂದೇನಹಳ್ಳಿಗೆ ತಾಗಿಕೊಂಡಿದ್ದ ಕೋಟಿಗಾನಹಳ್ಳಿಯಲ್ಲಿರುವ ಸುಮಾರು 40 ಮಂದಿ ಜೀತದಾಳುಗಳ ಪಟ್ಟಿಯನ್ನು ಮುನಿಯಪ್ಪರವರ ಜೊತೆಗೂಡಿ ಎಸ್.ಪಿ.ಯವರ ಕಛೇರಿಯಲ್ಲೇ ಅವರಿಗೆ ಒಪ್ಪಿಸುವಾಗ ಎಸ್.ಪಿ.ಯವರ ಉದ್ಗಾರ ಇಂಗ್ಲೀಷ್‌ನಲ್ಲಿ, "Now I know why they are against you." ("ನನಗೆ ಈಗ ಗೊತ್ತಾಯಿತು ಅವರು ನಿಮ್ಮ ವಿರುದ್ಧ ಏಕೆ ಇದ್ದಾರೆಂದು.") ಎಂದಾಗಿತ್ತು.

ಆಗಸ್ಟ್ 11ರಂದು ನನ್ನನ್ನು ಊರಿಂದ ಹೊರಗೆ ತಳ್ಳಿದ್ದ ಘಟನೆಯ ಪೂರ್ವಾಪರಗಳೇನು? ಎಸ್.ಪಿ.ಯವರು ಸೂಕ್ಷ್ಮವಾಗಿ **ಗುರುತಿಸಿದ್ದು** – ದಲಿತರ ಮೇಲಿನ ದೌರ್ಜನ್ಯಕ್ಕೆ ಜೀತ ಪದ್ಧತಿಯ ಹಿನ್ನೆಲೆ ಇರುವುದು – ನಿಜವಾದ ಕಾರಣವಾಗಿದ್ದರೆ ಅದನ್ನು ಬಲಿಷ್ಠ ವರ್ಗದವರು ಹೊರಗೆ ತೋರಿಸಿಕೊಂಡಿದ್ದು – ಇಲ್ಲದ ಮತೀಯ, ಮತಾಂತರದ ಗುಲ್ಲೆಬ್ಬಿಸಿದ್ದು – **ಆಳವಾಗಿ ಯೋಚನೆ ಮಾಡುವ ವಿಷಯಗಳಾಗಿವೆ. ಈ ವಿಚಾರಗಳಿಗೆ ಸ್ಪಷ್ಟತೆ ಕೊಡುತ್ತಾ ಎಸ್.ಪಿ.ಯವರ ಪ್ರಶ್ನೆ-ಪ್ರತಿಕ್ರಿಯೆಗಳು** ಜೀತ ಸಮಸ್ಯೆ ಬಗ್ಗೆ ನನ್ನ ಸಂಪೂರ್ಣ ಗಮನವನ್ನು ಕೇಂದ್ರೀಕರಿಸುವಂತೆ ಮಾಡಿ ಅದರ ಬಗ್ಗೆ ಅನ್ವೇಷಣೆ-ಅಧ್ಯಯನ-ವಕಾಲತಿ ಮಾಡಿ ಸಂಘಟನೆಗಳನ್ನು ಕಟ್ಟಿ ಬೆಳೆಸಿದರ ಕುರಿತು ಮುಂದೆ ವಿವರಗಳಿವೆ.

ನನ್ನ ಹಂಬಲಗಳು – ಜೀವನಾದರ್ಶಗಳು

ರೈತ ಕುಟುಂಬದಲ್ಲಿ ಹುಟ್ಟಿ ಬೆಳೆದ ನನಗೆ ಹೂಗಿಡಗಳು, ಪ್ರಾಣಿಪಕ್ಷಿಗಳು, ಬಡವರು, ಮನೆಯಲ್ಲಿ ದುಡಿಯುತ್ತಿರುವ ಕೂಲಿಯಾಳುಗಳು ಮತ್ತು ಮನೆಗೆಲಸದವರ ಬಗ್ಗೆ ವಿಶೇಷ ಒಲವು ಚಿಕ್ಕಂದಿನಿಂದಲೂ ಇತ್ತು. ಆಧ್ಯಾತ್ಮ ಜೀವನ, ಯೇಸುವಿನ ಮಾರ್ಗದಲ್ಲಿ ನಡೆಯಬೇಕೆಂಬ ಅತೀವ ಹಂಬಲದ ಜೊತೆಗೆ ದಿನದಲಿತರ ಸೇವೆಯಲ್ಲಿ ತೊಡಗಿಸಿಕೊಳ್ಳಬೇಕೆಂದಿರುವ ನನ್ನ ಆಸೆ ನನ್ನನ್ನು ಜೆಜ್ವಿಟ್ ಸಂಘದಲ್ಲಿ ಸನ್ಯಾಸಿಯಾಗಲು ಪ್ರೇರೇಪಿಸಿತ್ತು. ಅದಾಗಿಯೂ ನಿಜ ಜನಸೇವೆಯ ಆಯಾಮಗಳ ಅನ್ವೇಷಣೆಯಲ್ಲಿ ತೊಡಗಿ ನನ್ನದೇ ಆದ ಕೆಲವು ಒಳನೋಟಗಳನ್ನು ನನ್ನದಾಗಿಸಿಕೊಂಡಿದ್ದೆ. ಅವುಗಳಲ್ಲಿ ಕೆಲವು ಪ್ರಮುಖ ನಿಲುವುಗಳು ಹೀಗಿವೆ:

1. ಭಾರತದಲ್ಲಿಯ ಬಡವರೆಂದರೆ ಒಟ್ಟಾರೆಯಾಗಿ ದಲಿತರು ಮತ್ತು ಮೂಲನಿವಾಸಿಗಳು – ಆರ್ಥಿಕ ಆಯಾಮಕ್ಕಿಂತ ದೊಡ್ಡ ಪ್ರಮಾಣದಲ್ಲಿ ಸಾಮಾಜಿಕ ಆಯಾಮವು ಭಾರತದಲ್ಲಿಯ ಬಡವರನ್ನೂ ಇಡೀ ಸಾಮಾಜಿಕ ವ್ಯವಸ್ಥೆಯನ್ನೂ ಹತೋಟಿಯಲ್ಲಿಟ್ಟುಕೊಂಡಿದೆ.
2. ಬಡವರ ಉದ್ಧಾರಕ್ಕೆ ದಾರಿ ಹೊರಗಿನವರು ಅವರಿಗೋಸ್ಕರ ಯೋಜನೆಗಳನ್ನು ರೂಪಿಸಿ ಅವನ್ನು ಅವರ ಪರವಾಗಿ ಕಾರ್ಯಗತಗೊಳಿಸುವುದಲ್ಲ; ಬಡವರನ್ನೇ ಜಾಗೃತಗೊಳಿಸಿ ಆ ಅರಿವಿನಂದ ಅವರು ಸಂಘಟಿತರಾಗಿ ಹೋರಾಡಿ ತಮ್ಮ ಸಮಸ್ಯೆಗಳನ್ನು ತಮ್ಮ ಮುಖಂಡತ್ವದಲ್ಲೇ ಬಗೆಹರಿಸುವುದೇ ಸೂಕ್ತ ಮತ್ತು ಹೆಚ್ಚು ಪರಿಣಾಮಕಾರಿಯಾಗಿರುವ ಮಾರ್ಗ.

ಹಂದೇನಹಳ್ಳಿಗೆ ಬರುವ ಮುಂಚೆ ನಾನು ಕೈಗೊಂಡ ಜಾಗೃತಿ–ಸಂಘಟನೆ ಕಾರ್ಯಗಳು: ಸಿದ್ದಿಯರ ಸಂಘಟನೆ

ಹಂದೇನಹಳ್ಳಿಗೆ ಹೋಗುವ ಮುಂಚೆ ಸಿದ್ದಿ ಜನಾಂಗದ ಬಗ್ಗೆಯೂ ವಯಸ್ಕರ ಶಿಕ್ಷಣದ ಬಗ್ಗೆಯೂ ತೊಡಗಿಸಿಕೊಂಡಿದ್ದೆ. **1983–84ರ ಒಂದು ವರ್ಷ ಮುಂಡಗೋಡದ ಮೈನಳ್ಳಿಯ ಸಿದ್ದಿಯರ ಜೊತೆ** ಇದ್ದು ಮೇಲೆ ವಿವರಿಸಿದ ಆಶಯಗಳಿಗೆ ರೂಪ ಕೊಡುತ್ತಿದ್ದೆ. ಅದರ ಜೊತೆ ಅವರ ಆಮೂಲಾಗ್ರ ಬದಲಾವಣೆಗೆ ಮೂರು ಧಾರ್ಮಿಕ ಪಂಗಡಗಳಲ್ಲಿ ಹಂಚಿಹೋಗಿ ಒಂದು ಜನಾಂಗವಾಗಿ ಗುರುತಿಸದಿದ್ದವರನ್ನು **ಒಂದು ಅನುಸೂಚಿತ ಜನಾಂಗವಾಗಿ ಗುರುತಿಸಲ್ಪಡುವುದೇ ಜರೂರಾಗಿ ನಡೆಯಬೇಕಾದ ಕೆಲಸವೆಂದು ತೀರ್ಮಾನಿಸಿ** ಜಾಗೃತಿ–ಸಂಘಟನೆ ಸೂತ್ರಗಳನ್ನು ಅನುಸರಿಸಿಯೇ ಆ ಕಾರ್ಯಕ್ಕೆ ಇತರರ ಜೊತೆಗೂಡಿ ಚಾಲನೆ ಕೊಟ್ಟಿದ್ದೆ. ಜೊತೆಗೆ ಮೂರು ಧರ್ಮದ ಸಿದ್ದಿಯರ ಜನಾಂಗೀಯ ಸಾಮ್ಯತೆಯನ್ನು ದೃಢಪಡಿಸುವ ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ಹಾಗೂ ಜನಸಂಖ್ಯೆಯ ವಿವರಗಳನ್ನು ವೈಜ್ಞಾನಿಕವಾಗಿ ಕಲೆಹಾಕಿ ಒಂದು ಸುದೀರ್ಘ ಪ್ರಬಂಧವನ್ನು ರಚಿಸಿದ್ದೆ. ಆ ಪ್ರಬಂಧದ ಆಧಾರದ ಮೇಲೆ 1987ರಲ್ಲಿ ಕರ್ನಾಟಕ ಸರ್ಕಾರವು ಸಿದ್ದಿಯರನ್ನು ಹಿಂದುಳಿದ ಜನಾಂಗವೆಂದು ಗುರುತಿಸಿ ಆದೇಶವೊಂದನ್ನು ಹೊರಡಿಸಿತ್ತು; 2003ರಲ್ಲಿ ಸಂಸತ್‌ಸಭೆಯು ಅನುಸೂಚಿತ ಜನಾಂಗವೆಂದು ಅಧಿನಿಯಮವೊಂದನ್ನು ಜಾರಿಗೊಳಿಸಿತ್ತು. ಈಗ ಸಿದ್ದಿ ಜನಾಂಗವು ಕರ್ನಾಟಕದ 51ನೇ ಮತ್ತು ಕೊನೆಯ ಅನುಸೂಚಿತ ಜನಾಂಗವಾಗಿ ಗುರುತಿಸಲ್ಪಟ್ಟಿದೆ.

ಪಾಉಲೊ ಫ್ರೇಇರೆಯರ ಸಿದ್ಧಾಂತಗಳನ್ನು ಬಳಸಿ ಕನ್ನಡದಲ್ಲಿ ವಯಸ್ಕರ ಶಿಕ್ಷಣದ ಮಾದರಿ ರೂಪಿಸಿದ್ದು

ಮೈನಳ್ಳಿಯ ಸಿದ್ದಿ ಜನರ ಜೊತೆ ಪ್ರಯತ್ನಿಸಿದ **ಅರಿವಿನ ಜಾಗೃತಿ ಮೂಲಕ ನಡೆಸುವ** ವಯಸ್ಕರ ಶಿಕ್ಷಣಕ್ಕೆ 1985ರಲ್ಲಿ ತುಮಕೂರಿನ ಶಿರಾ ತಾಲೂಕಿನಲ್ಲಿ **ಒಂದು ಖಚಿತ ಚೌಕಟ್ಟು ತಯಾರಿಸಿದ್ದೆ.**

1975ರಲ್ಲೇ ನಾನು ತತ್ವಶಾಸ್ತ್ರದ ವಿದ್ಯಾರ್ಥಿಯಾಗಿದ್ದಾಗ ಬ್ರೆಝಿಲ್ ದೇಶದ ಪ್ರಖ್ಯಾತ ಶಿಕ್ಷಣ ತಜ್ಞ ಹಾಗೂ ಸಾಮಾಜಿಕ ಕಾರ್ಯಕರ್ತ **ಪಾಲುಲೊ ಫ್ರೆಇರೆಯವರ ವಯಸ್ಕರ ಶಿಕ್ಷಣದ ಸಿದ್ಧಾಂತಗಳಿಂದ ಆಳವಾಗಿ ಪ್ರಭಾವಿತನಾಗಿದ್ದೆ.** ಶಿರಾದ ಆಮೆಲಗೊಂದಿಯಲ್ಲಿ ಸುಮಾರು 100 ಮಂದಿ ಯುವಕ-ಯುವತಿಯರಿಗೆ ಫ್ರೆಇರೆಯವರ ಸಿದ್ಧಾಂತಗಳನ್ನು ಆಧರಿಸಿ ತರಬೇತಿ ಕೊಟ್ಟು ಐದಾರು ತಿಂಗಳು ಅವರ ಮೂಲಕ ಸುತ್ತುಮುತ್ತಲಿನ ಹಳ್ಳಿಗಳಲ್ಲಿ ಅದನ್ನು ಕಾರ್ಯಗತಗೊಳಿಸಿದ ಅನುಭವದಲ್ಲಿ ಕನ್ನಡದಲ್ಲಿ ವಯಸ್ಕರ ಶಿಕ್ಷಣ ನಡೆಸಲು ಪರಿಣಾಮಕಾರಿಯಾದ ರೂಪರೇಷೆಗಳನ್ನು ರಚಿಸಿ ಪ್ರಕಟಿಸಿದ್ದೆ. ಆ ಪದ್ಧತಿ ಬಗ್ಗೆ ಹಲವಾರು ಜಿಲ್ಲೆಗಳಲ್ಲಿಯ ಬೇರೆಬೇರೆ ಸಂಘಸಂಸ್ಥೆಗಳಿಗೆ ತರಬೇತಿ ಕೊಡಲಾರಂಭಿಸಿದ್ದೆ.

ಆನೇಕಲ್‌ನಲ್ಲಿ ದಲಿತರ ಜೊತೆಗಿನ ಹೊಸ ಕ್ಷೇತ್ರ

ಮಾನವ ಶಾಸ್ತ್ರದಲ್ಲಿ **1983ರಲ್ಲಿ ಸ್ನಾತಕೋತ್ತರ ಪದವಿಯನ್ನು ಪ್ರಥಮ ದರ್ಜೆಯಲ್ಲಿ ಪ್ರಥಮನಾಗಿ ತೇರ್ಗಡೆ ಹೊಂದಿದ್ದಾಗ** ಸಂಶೋಧನೆಯಲ್ಲಿ ತೊಡಗಿಸಿಕೊಳ್ಳಬೇಕೆಂಬ ಒತ್ತಡಗಳಿದ್ದರೂ ಸಿದ್ದಿ ಜನರ ಜೊತೆ ಒಂದು ವರ್ಷ ಸಾಮಾಜಿಕ ಬದಲಾವಣೆಯಲ್ಲಿ ನನ್ನ ಕಾಳಜಿಗಳನ್ನು ಕಾರ್ಯಗತಗೊಳಿಸಲು ಮೊದಲ ಪ್ರಯತ್ನ ಮಾಡಿದ್ದೆ. ಅದಾದ ಮೇಲೆ ಇನ್ನೊಂದು ವರ್ಷ ಜೆಜ್ವಿಟ್ ಸಂಘದ ಕೊನೆಯ ಹಂತದ ತರಬೇತಿಗಳಲ್ಲಿ ಪಾಲ್ಗೊಂಡು **1985ರಲ್ಲಿ ಎನ್.ಇ.ಟಿ.ಯ ಪ್ರಥಮ ಬಾರಿ ನಡೆದ ಪರೀಕ್ಷೆಯಲ್ಲಿ ತೇರ್ಗಡೆಯಾದರೂ** ಸಮಾಜದ ಅಧ್ಯಯನಕ್ಕಿಂತ ಅದರ ಬದಲಾವಣೆಯಲ್ಲಿ ತೊಡಗುವುದೇ ಉತ್ತಮ ದಾರಿಯೆಂದು ನಿರ್ಧರಿಸಿ ಆನೇಕಲ್‌ನಲ್ಲಿ ದಲಿತ ಜನಾಂಗದ ಜೊತೆ ನನ್ನ ಅದೇ ಕಾಳಜಿಗಳನ್ನು ಕಾರ್ಯಗತಗೊಳಿಸುವ ಪ್ರಯತ್ನವನ್ನು ಮುಂದುವರಿಸಿದ್ದೆ.

ಹಂದೇನಳ್ಳಿಯ ಪರಿಚಯ ಮತ್ತು ಅಲ್ಲಿ ವಾಸ್ತವ್ಯ ಹೂಡಿದ್ದು

ಆನೇಕಲ್‌ನಲ್ಲಿ ಜೆಜ್ವಿಟ್ ಸಂಘವು ಹಲವಾರು ಸಾಮಾಜಿಕ ಕಾರ್ಯಗಳನ್ನು ನಡೆಸುತ್ತಿತ್ತು. ಅಲ್ಲಿಯ ಜೆಜ್ವಿಟ್ ತಂಡದ ನಾಯಕರು ನನ್ನ ಕಾಳಜಿಗಳನ್ನು ಕಾರ್ಯರೂಪಕ್ಕಿಳಿಸಲು ನನಗೆ ಸಂಪೂರ್ಣ ಸ್ವಾತಂತ್ರ್ಯ ಕೊಟ್ಟಿದ್ದರು. ದಲಿತ ಸಮುದಾಯದ ಜೊತೆ ನಿಕಟ ಸಂಬಂಧ ಬೆಳೆಸುವುದು ನನ್ನ ಮೊದಲ ಆದ್ಯತೆಯಾಗಿತ್ತು. ಕೆಲವು ಪರಿಚಯಗಳ ಮೂಲಕ ಒಂದೊಂದೇ ಹಳ್ಳಿಗೆ ಹೋಗಿ ಅಲ್ಲಿ ಕೆಲವು ದಿನ ಇದ್ದು ಸಂಜೆ ಹೊತ್ತು ಅಲ್ಲಿಯ ಯುವಕರ ಜೊತೆ ಸಾಮಾಜಿಕ ವಿಶ್ಲೇಷಣೆಯ ಕೆಲವು ಚಟುವಟಿಕೆಗಳನ್ನು ನಡೆಸಿಕೊಂಡು ಹೋಗುತ್ತಿದ್ದೆ. ಅರಿವಿನ ಜಾಗೃತಿ ಮೂಲಕದ ವಯಸ್ಕರ ಶಿಕ್ಷಣದ ತರಬೇತಿಗಳನ್ನೂ ನಡೆಸುತ್ತಿದ್ದೆ. ಅಂತಹ ಒಂದು ತರಬೇತಿಯಲ್ಲಿ ಭಾಗವಹಿಸಿದ್ದ ಹಂದೇನಹಳ್ಳಿಯ ಒಬ್ಬ ಯುವಕನ ಮೂಲಕ ತರಬೇತಿಯ ನಂತರ ಆ ಊರಲ್ಲಿ ನಡೆಯುವ ವಯಸ್ಕರ ಶಿಕ್ಷಣವನ್ನು ಗಮನಿಸಲು ಅಲ್ಲಿಗೆ ಆಗಿಂದಾಗ್ಗೆ ಭೇಟಿ ಕೊಡುತ್ತಿದ್ದೆ. 1986ರ ಆರಂಭದಲ್ಲಿ ಹಂದೇನಹಳ್ಳಿಯಲ್ಲಿ ನಡೆಸಿದ ಸಮಾಜ ವಿಶ್ಲೇಷಣೆಯ ಕಾರ್ಯಕ್ರಮದಿಂದ ಪ್ರಭಾವಿತರಾದ ಅಲ್ಲಿಯ ಯುವಕರು ನನ್ನ ನಿಲುವು ಕಾಳಜಿಗಳ ಬಗ್ಗೆ ಸಮ್ಮತ ಸೂಚಿಸಿ ತಾವೂ ಅದೇ ರೀತಿಯಲ್ಲಿ ಯೋಚಿಸುತ್ತಿರುವುದಾಗಿಯೂ ನನ್ನ ಮುಂದಿನ ಕಾರ್ಯಕ್ರಮಗಳಿಗೆ ಸಂಪೂರ್ಣ ಬೆಂಬಲ ಸೂಚಿಸಿದ್ದೂ ಮಾತ್ರವಲ್ಲದೇ ನಾನು ಅವರಲ್ಲೇ ತಂಗಿದ್ದು ಅವನ್ನು ನಡೆಸಿಕೊಂಡು ಹೋಗಬೇಕೆಂದು ನನ್ನಲ್ಲಿ ವಿನಂತಿಸಿದ್ದರು. ಅಷ್ಟೇ ಅಲ್ಲ ಊರಲ್ಲಿ ಉಳಕೊಳ್ಳಲಿಕ್ಕೆ ನನಗೆ ಒಂದು ಪ್ರತ್ಯೇಕ ಕೋಣೆಯನ್ನು ಕಟ್ಟಿಕೊಡುತ್ತೇವೆಂದು ಭರವಸೆ ನೀಡಿದ್ದರು. 1986ರ ಡಿಸೆಂಬರ್ 1ರಂದು ಆ ಊರಿನ ಯುವಕರಾದ ಹಂಕಿ ವೆಂಕಟಸ್ವಾಮಿ ಮತ್ತು ಕರಗಪ್ಪರೊಂದಿಗೆ ಹಂದೇನಹಳ್ಳಿ ದಲಿತ ಕಾಲೊನಿಯಲ್ಲಿ ವಾಸ್ತವ್ಯ ಹೂಡಲು ಆನೇಕಲ್‌ನಿಂದ ಹೋಗಿದ್ದೆ.

ಹಂದೇನಹಳ್ಳಿಯು ಆನೇಕಲ್ ತಾಲೂಕಿನ ಸರ್ಜಾಪುರ ಹೋಬಳಿಯಲ್ಲಿರುವ ಒಂದು ದೊಡ್ಡ ಊರು. ಅದು ಬೆಂಗಳೂರಿನಿಂದ ಕೇವಲ 32–35 ಕಿ.ಮೀ. ದೂರದಲ್ಲಿದೆ. ಅಲ್ಲಿ ಎರಡೇ ಪ್ರಮುಖ ಜಾತಿ – ದಲಿತ ಮತ್ತು ರೆಡ್ಡಿ – ಗಳು ಇದ್ದವು. ದಲಿತ ಮನೆಗಳು 90 ಇದ್ದರೆ ರೆಡ್ಡಿ ಕುಟುಂಬಗಳು 300. ಅಗಸರು ಮತ್ತು ಕಮ್ಮಾರರು 4–5 ಕುಟುಂಬಗಳು, ಒಂದು ಲಿಂಗಾಯಿತ ಕುಟುಂಬ ಮಾತ್ರ ಅಲ್ಲಿದ್ದವು. ದಲಿತರಲ್ಲಿ ಹೆಚ್ಚಿನವರು ಸಣ್ಣ, ಅತಿ ಸಣ್ಣ ರೈತರು ಮತ್ತು ಕೃಷಿಕಾರ್ಮಿರಾಗಿದ್ದು ಬಹುತೇಕ ಎಲ್ಲರೂ ದಿನಗೂಲಿಗಳಾಗಿಯೇ ಜೀವನ ನಡೆಸುತ್ತಿದ್ದರು. ರೆಡ್ಡಿಗಳು ಊರಿಗೆ ದಲಿತರಿಗಿಂತ ನಂತರ ಬಂದವರಾಗಿದ್ದು ಕಾಲಕ್ರಮೇಣ ದಲಿತರಿಂದ ಭೂಮಿಯನ್ನು ವಸೂಲಿ ಮಾಡಿ ತಾಲೂಕಿನ ಬೇರೆ ಊರುಗಳಲ್ಲಿಯಂತೆ ಬಲಿಷ್ಠ ವರ್ಗವಾಗಿ ರೂಪುಗೊಂಡಿತ್ತು. ಇಷ್ಟರವರೆಗೆ ರೆಡ್ಡಿಯವರು ಮತ್ತು ದಲಿತರ ನಡುವೆ ಹಲವಾರು ಸಂಘರ್ಷಗಳು ನಡೆದು ಹೋಗಿದ್ದವು.

ಮಂಡಲ್ ಪಂಚಾಯತಿ ಚುನಾವಣೆ ಘೋಷಣೆ –

ದಲಿತರಿಗೆ ಕರ್ನಾಟಕ ಪಂಚಾಯತಿ ರಾಜ್ ಕಾನೂನಿನ ಪರಿಚಯ ಮಾಡುವಾಗ ಹುಟ್ಟಿದ ಸಂಘರ್ಷ

ನಾನು ಹಂದೇನಹಳ್ಳಿಯಲ್ಲಿ ವಾಸವಾಗಲು ತೊಡಗಿದ್ದ ಕೆಲವೇ ದಿನಗಳಲ್ಲಿ ಕರ್ನಾಟಕ ಸರ್ಕಾರವು 1983ರಲ್ಲಿ ಜ್ಯಾರಿಗೊಳಿಸಿದ್ದ ಮಂಡಲ್ ಪಂಚಾಯತಿ, ತಾಲೂಕು ಪಂಚಾಯತಿ, ಜಿಲ್ಲಾ ಪಂಚಾಯತಿ ಮತ್ತು ನ್ಯಾಯ ಪಂಚಾಯತಿ ಮಸೂದೆಯನ್ವಯ ಚುನಾವಣೆಗಳನ್ನು ರಾಜ್ಯಾದ್ಯಂತ 1987ರ ಜನೆವರಿಯಲ್ಲಿ ಮತ್ತು ಬೆಂಗಳೂರು ಜಿಲ್ಲೆಯಲ್ಲಿ ಎಪ್ರಿಲ್‌ನಲ್ಲಿ ನಡೆಸಲಾಗುವುದೆಂದು ಘೋಷಿಸಿತ್ತು. ಇದು ನನಗೆ ತಿಳಿದು ಬಂದಿದ್ದು ಡಿಸೆಂಬರ್ 6ರ ಸಂಜೆ. ಬೆಳಿಗ್ಗೆ ಸುಮಾರು 25 ಯುವಕರೊಂದಿಗೆ ಸೈಕಲ್‌ನಲ್ಲಿ ಆಗಿನ ಬಾಮ್‌ಸೆಫ್ ಸಂಘಟನೆ ಅಡಿ ಬಿ. ಗೋಪಾಲ್‌ರವರು ಏರ್ಪಡಿಸಿದ್ದ ಅಂಬೇಡ್ಕರ್ ಕುರಿತ ಒಂದು ಬಹಿರಂಗ ಸಮಾವೇಶದಲ್ಲಿ ಭಾಗವಹಿಸಿ ಹಿಂತಿರುಗುತ್ತಿದ್ದೆ. ಸರ್ಜಾಪುರದಲ್ಲಿರುವ ಫೆಡಿನಾ ಸಂಸ್ಥೆಯಲ್ಲಿಯ ಒಬ್ಬ ಬೀದಿನಾಟಕ ತರಬೇತುದಾರರನ್ನು ಆ ದಿವಸ ಸಂಜೆ ಭೇಟಿಯಾದಾಗ ಅವರು ನನಗೆ ಈ ವಿಷಯ ತಿಳಿಸಿದರು. ಇದರ ಬಗ್ಗೆ ಆನೇಕಲ್ ತಾಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿರುವ 4–5 ಸಂಸ್ಥೆಗಳ ಕಾರ್ಯಕರ್ತರಿಗೆ ಪಂಚಾಯತಿ ಕಾನೂನಿನ ಬಗ್ಗೆ ಮಾಹಿತಿ ಮತ್ತು ಅದನ್ನು ಜನರಿಗೆ ಮುಟ್ಟಿಸಲು ಬೀದಿನಾಟಕದ ಕೌಶಲ್ಯಗಳ ಬಗ್ಗೆ ತರಬೇತಿಯನ್ನು ಒಬ್ಬ ಸೂಕ್ತ ತರಬೇತಿದಾರರ ಮುಖಾಂತರ 1987ರ ಜನೆವರಿಯಲ್ಲಿ ನಡೆಸುವುದೆಂದು ತೀರ್ಮಾನಿಸಲಾಗಿತ್ತು. ಆ ತರಬೇತಿಯು ಜನೆವರಿಯ 3ನೇ ವಾರದಲ್ಲಿ ನಡೆದಿದ್ದಿರಬಹುದು.

ಹಂದೇನಹಳ್ಳಿಯ ದಲಿತ ಯುವಕರು ನಾಲ್ಕು ವರ್ಷಗಳ ಹಿಂದೆ ಜೈ ಭೀಮ್ ಯುವಕ ಸಂಘವನ್ನು ಕಟ್ಟಿದ್ದರು. ಅದರ ಮೂಲಕ ಊರಿನ ಎಲ್ಲಾ ದಲಿತ ಮುಖಂಡರನ್ನು ಸೇರಿಸಿ ಊರಲ್ಲಿ ಒಂದು ಸಂಘವನ್ನು ಕಟ್ಟಲಾಗಿತ್ತು. ಸದಸ್ಯರು ವಾರಕ್ಕೊಂದು ಸಾರಿ ಸಭೆ ನಡೆಸುತ್ತಿದ್ದರು. ಅದೇ ರೀತಿ ಅಕ್ಕಪಕ್ಕದ 7–8 ಊರುಗಳಲ್ಲಿಯೂ ಸಂಘಗಳನ್ನು ಕಟ್ಟಲಾಗಿತ್ತು.

ನನ್ನನ್ನು ಊರಿನಿಂದ ಹೊರಗೆ ಕಳುಹಿಸಬೇಕೆಂದು ಬಲಿಷ್ಠ ವರ್ಗದಿಂದ ದಲಿತರ ಮೇಲೆ ಒತ್ತಡ ಮತ್ತು ದೌರ್ಜನ್ಯ

ಪಂಚಾಯತ್ ಕಾನೂನಿನ ತರಬೇತಿ ನಂತರ ಹಂದೇನಹಳ್ಳಿಯ 12–15 ಯುವಕರು ಜನವರಿ ತಿಂಗಳ ಕೊನೆಯಿಂದ ಬೇರೆಬೇರೆ ಊರುಗಳಿಗೆ ಸೈಕಲ್‌ನಲ್ಲಿ ಸಂಜೆ ಹೊತ್ತು ಹೋಗಿ ಬೀದಿನಾಟಕಗಳನ್ನು ಕೊಟ್ಟು ಮಧ್ಯ ರಾತ್ರಿ ಸುಮಾರಿಗೆ ಸ್ವಂತ ಊರಿಗೆ ಮರಳುತ್ತಿದ್ದರು. ಹೀಗೆ 3–4 ದಿನ ಕಳೆದಿರಬಹುದು. ಮಂಜು ಮುಸುಕಿರುವ ಚಳಿಗಾಲದ ಮುಂಜಾನೆಯ ಎಳೆಬಿಸಿಲಿನಲ್ಲಿ

ಮೈ ಬೆಚ್ಚಗಾಗಿಸಲು ಉಣ್ಣೆ ಕಂಬಳಿ ಹೊಯ್ದು ಗಂಡಸರು ಹರಟೆ ಹೊಡೆಯುತ್ತಿದ್ದ ವೇಳೆ ನಡೆಯುತ್ತಿದ್ದ ಪಿಸುಮಾತುಗಳನ್ನು ಆಗ ತಾನೆ ಎಚ್ಚರಗೊಂಡಿದ್ದ ನನಗೆ ಕೆಲ ಯುವಕರು ತಲುಪಿಸಿದ್ದರು. "ದಲಿತರಲ್ಲಿ ಏನೋ ಸಂಚಲನೆಯಾಗುತ್ತಿದೆ. ಅದಕ್ಕೆಲ್ಲಾ ಕಾರಣ ಕಿರಣ್. ಆದ್ದರಿಂದ ನೀವು ಕಿರಣ್‌ರನ್ನು ಊರಿಂದ ಕಳುಹಿಸಿಕೊಡಲೇ ಬೇಕು" ಎಂದು ರೆಡ್ಡಿ ಮುಖಂಡರು ದಲಿತ ನಾಯಕರಿಗೆ ತಾಕೀತು ಹಾಕಿದ್ದರು. ಕಾರಣವೇನೆಂದು ತಿಳಿಯಲಾಗದೇ ನಾನು ಗೊಂದಲಕ್ಕೀಡಾದೆ. ಯಾರೂ ಯಾವುದೇ ಹಕ್ಕನ್ನು ಪ್ರತಿಪಾದಿಸಿರಲಿಲ್ಲ; ಕೂಲಿ ಹೆಚ್ಚಳಕ್ಕೆ ಪ್ರತಿಭಟನೆ ನಡೆಸಿರಲಿಲ್ಲ. ಊರಲ್ಲಿ ವಾಸಮಾಡಲು ಬರುವ ಮುಂಚೆಯೇ ಊರಿಗೆ ಆಗಾಗ್ಗೆ ಬಂದು ಹೋಗುತ್ತಿದ್ದಾಗ, "ಕಿರಣರವರಿಗೆ ಯಾವುದೇ ಬೆಂಬಲ ಕೊಡಬೇಡಿ; ಅವರ ಜೊತೆ ಏನೂ ವ್ಯವಹಾರ ಮಾಡಬೇಡಿ. ಅವರು ಕ್ರಮೇಣ ನಿಮ್ಮನ್ನು ಮತಾಂತರ ಮಾಡಲಿಕ್ಕೇ ಅವರು ನಿಮ್ಮಲ್ಲಿ ಬರುತ್ತಿದ್ದಾರೆ" ಎಂದು ಹೇಳುತ್ತಿದ್ದುದು ನೆನಪಾಯಿತು. ಊರಲ್ಲಿ ವಾಸಮಾಡಲು ಬರುವ ಮುಂಚೆ ಊರಲ್ಲಿ ಪರಿಚಯವಿದ್ದ ಒಬ್ಬ ಸಹೃದಯಿ ರೆಡ್ಡಿ ಮಿತ್ರರೊಬ್ಬರು ನಾನು ಊರಲ್ಲಿ ಬಂದು ನೆಲಸುತ್ತಿದ್ದೇನೆಂಬುದನ್ನು ತಿಳಿದು "ನೀವು ಊರಲ್ಲಿ ಉಳಕೊಳ್ಳವುದಾದರೆ ದಲಿತ ಕೇರಿಯಲ್ಲಿ ಇರಬೇಡಿ. ಊರ ಮಧ್ಯದಲ್ಲಿದ್ದರೆ ದಲಿತರಲ್ಲದವರಿಗೂ ನಿಮ್ಮನ್ನು ಭೇಟಿಯಾಗಲಿಕ್ಕೆ ಅನುಕೂಲವಾಗುತ್ತದೆ" ಎಂದು ಕೇಳಿದ್ದರು. "ದಲಿತರ ಜೊತೆ ಕೆಲಸ ಮಾಡುತ್ತಿದ್ದರೆ ಅವರೊಡನೆಯೇ ನಾನು ವಾಸಿಸುತ್ತೇನೆ" ಎಂದು ಅವರಿಗೆ ಉತ್ತರಿಸಿದ್ದೆ ಮತ್ತು ಹಾಗೆಯೇ ನಡೆದುಕೊಂಡಿದ್ದೆ. ಈಗ ಮತಾಂತರದ ದೂರಿನ ಜೊತೆಗೆ ಇನ್ನೂ ಬೇರೆ ರೀತಿಯ ವಿರೋಧ ಇದ್ದ ಹಾಗೆ ಕಾಣುತ್ತಿತ್ತು. ಆದರೆ ಯಾರೂ ಆ ದೂರು ಮತ್ತು ವಿರೋಧಗಳಿಗೆ ಬೆಲೆಕೊಟ್ಟಿರಲಿಲ್ಲ. ಮಾತ್ರವಲ್ಲ, "ಬೇರೆ ಯಾರಾದರೂ ಹಾಗೆ ಮಾಡಿದರೂ ಕಿರಣರವರು ಹಾಗಿಲ್ಲ; ನಾವು ಅವರಿಗೆ ಎಲ್ಲಾ ತರಹದ ಸಹಕಾರ ಕೊಡುತ್ತೇವೆ; ನಮಗೆ ಅವರಲ್ಲಿ ಪೂರ್ತಿ ನಂಬಿಕೆ ಇದೆ" ಎಂದು ದಲಿತ ಯುವಕರು, ಮುಖಂಡರು ನನ್ನ ಬಗ್ಗೆ ಅಭಿಮಾನ ಮತ್ತು ಬೆಂಬಲ ತೋರಿಸುತ್ತಿದ್ದರು.

ಊರಿಂದ ನನ್ನನ್ನು ಹೊರಹಾಕಬೇಕೆಂಬುದಕ್ಕೆ ನಿಜ ಕಾರಣ ತಿಳಿಯಲು ಹೆಚ್ಚಿನ ದಿನ ಹಿಡಿಯಲಿಲ್ಲ. ದಲಿತ ಯುವಕರು ಸಂಜೆ ಹೊತ್ತು ಪ್ಯಾಂಟ್ ಶರ್ಟ್‌ಹಾಕಿ ಗುಂಪಾಗಿ ಊರ ಮಧ್ಯದಿಂದ ಊರ ಹೊರಗೆ ಹೋಗುತ್ತಿರುವುದು ಊರೊಳಗೆ ಬರುತ್ತಿರುವುದು ಊರಿನ ಮೇಲ್ಜಾತಿಯೆನಿಸಿದವರು ಹಾಕಿದ ಒಂದು ಅಲಿಖಿತ ನಿರ್ಬಂಧವನ್ನು ಮುರಿದಂತಾಗಿತ್ತು. ಅದೇನೆಂದರೆ ದಲಿತರು ಊರೊಳಗೆ ಪ್ಯಾಂಟುಗಳನ್ನು ಧರಿಸುವಂತಿರಲಿಲ್ಲ. ಚೆಡ್ಡಿ/ಪಂಚೆ, ಶರ್ಟ್‌ಗಳನ್ನು ಮಾತ್ರ ಹಾಕಿಕೊಳ್ಳಬಹುದಾಗಿತ್ತು. "ಹೊಲೆಯರು ನಮ್ಮ ಮುಂದೆ ಒಳ್ಳೆ ಬಟ್ಟೆ ಹಾಕಿ ತಿರುಗಾಡಲಿಕ್ಕೆ ಅವರಿಗೆಷ್ಟು ಕೊಬ್ಬು. ಇದಕ್ಕೆಲ್ಲಾ ಕಾರಣ ಕಿರಣ್‌ರು. ಆದ್ದರಿಂದ ಅವರನ್ನು ನೀವು ಊರಿಂದ ಹೊರಗೆ ಹಾಕಬೇಕು" ಎಂಬುದು ಅವರ ಮಾತು ಕೇಳುವ ಕೆಲ ದಲಿತ ಹಿರಿಯರಿಗೆ ರೆಡ್ಡಿಯರಿಂದ ಒತ್ತಡ ಬರುತ್ತಾ ಇತ್ತು. ಒಂದು ದಿನ ಊರಲ್ಲಿರುವ ಒಂದೇ ಒಂದು ಟೀ ಹೋಟೆಲ್‌ನಲ್ಲಿ ಒಬ್ಬ ದಲಿತ ಮಧ್ಯ ವಯಸ್ಕರು ಕೈಗೆ ಚಿನ್ನ ಲೇಪನದ ವಾಚೊಂದನ್ನು ಕಟ್ಟಿ ಟೀ ಕುಡಿಯುತ್ತಿದ್ದಾಗ ಟೀ ಅಂಗಡಿಯ ಮಾಲಿಕನಾದ ಲಿಂಗಾಯತ ವ್ಯಕ್ತಿಯು, "ನೋಡಿ ಆ ದಲಿತನು ತನ್ನ ಶ್ರೀಮಂತಿಕೆಯನ್ನು ನಮ್ಮ ಮುಂದೆ ಮೆರೆಸುತ್ತಿದ್ದಾನೆ" ಎಂದು ಪ್ರತಿಕ್ರಿಯೆ ಕೊಟ್ಟಿದ್ದನು.

ಈ ಎಲ್ಲಾ ಬೆದರಿಕೆಗಳ ನಡುವೆಯೂ ಊರೂರಲ್ಲಿ ಪಂಚಾಯತ್ ಕಾನೂನಿನ ಬಗ್ಗೆ ಜಾಗೃತಿ ನೀಡುವ ಬೀದಿನಾಟಕ ಕಾರ್ಯಕ್ರಮಗಳು ನಡೆಯುತ್ತಾ ಇದ್ದವು. ಅಕ್ಕಪಕ್ಕದ ಊರುಗಳಲ್ಲಿ ಸಂಘಗಳೂ ನಡೆಯುತ್ತಿದ್ದವು.

ಎಪ್ರಿಲ್ ತಿಂಗಳಲ್ಲಿ ಬೆಂಗಳೂರಿನ ಕೆಲ ಕಾಲೇಜ್ ಯುವಕರು ಊರಿನ ದಲಿತ ಯುವಕರ ಜೊತೆ ಸೇರಿ ಬೀದಿನಾಟಕ ತರಬೇತಿಯ ಒಂದು ಕಾರ್ಯಕ್ರಮವನ್ನಿಟ್ಟಿದ್ದರು. ಪಕ್ಕದ ಮುತ್ತಾನಲ್ಲೂರಿನಲ್ಲಿಯ ಖಾಸಗಿ ಪ್ರೌಢಶಾಲೆಯಲ್ಲಿ ಮುಖ್ಯೋಪಧ್ಯಾಯರಾಗಿರುವ ಹಂದೇನಹಳ್ಳಿಯವರೇ ಆದ ಒಬ್ಬ ಪ್ರಗತಿಪರ ರೆಡ್ಡಿಯವರ ಮಧ್ಯಸ್ಥಿಕೆಯಲ್ಲಿ ಊರಿನಲ್ಲಿರುವ ಒಂದು ರೆಡ್ಡಿ ಸಂಸ್ಥೆಯ ಒಡೆತನದಲ್ಲಿಯ ಖಾಸಗಿ ಶಿಶುವಿಹಾರವೊಂದರಲ್ಲಿರುವ ವಿಶಾಲ ಕೋಣೆಯನ್ನು ತರಬೇತಿಗೆ ಬಳಸಲು ಒಪ್ಪಿಗೆ ಪಡೆಯಲಾಗಿತ್ತು. ಆದರೆ ಅದೇ ಮಧ್ಯಾಹ್ನ ಹೊತ್ತಿಗೆ ಸಂಸ್ಥೆಯ ಇತರ ಸದಸ್ಯರು ಸೇರಿ ಆ ಒಪ್ಪಿಗೆಯನ್ನು ನಿರಾಕರಿಸಿ ತರಬೇತಿಯು ತಮ್ಮ ಕಟ್ಟಡದಲ್ಲಿ ನಡೆಯದಂತೆ ನೋಡಿಕೊಂಡಿದ್ದರು. ನಂತರ ದಲಿತ ಕೇರಿಯ ಪಕ್ಕದಲ್ಲಿರುವ ಸರ್ಕಾರಿ ಮಾಧ್ಯಮಿಕ ಶಾಲೆಯ ಪಡಶಾಲೆ ಮತ್ತು ಮಠಾರದಲ್ಲಿ ತರಬೇತಿಯನ್ನು ಮುಂದುವರೆಸಲಾಗಿತ್ತು. ಶಾಲಾ ಪಡಶಾಲೆಯಲ್ಲಿ ದಿನನಿತ್ಯ ದಲಿತ ಯುವಕರು ರಾತ್ರಿ ಹೊತ್ತು ಮಲಗುತ್ತಿದ್ದರು. ಆದರೆ ಶಾಲೆಯ ಕೊಠಡಿಗಳನ್ನು ಬಳಸಲು ತಾಲೂಕು ಶಿಕ್ಷಣಾಧಿಕಾರಿಗಳು ಕೆಲವು ರೆಡ್ಡಿ ಮುಖಂಡರ ಒತ್ತಡಕ್ಕೆ ಮಣಿದು ಮೊದಲು ಒಂದು ಸಲ ಶಾಲಾ ಕಟ್ಟಡ ಬಳಕೆಗೆ ಅನುವು ಮಾಡಿಕೊಟ್ಟಿದ್ದರೂ ಬೀದಿನಾಟಕ ತರಬೇತಿಗೆ ಪರವಾನಿಗೆಯನ್ನು ನಿರಾಕರಿಸಿದ್ದರು. ತರಬೇತಿಯನ್ನು ದಲಿತಕೇರಿಯ ಇಕ್ಕಟ್ಟಿನ ಜಾಗದಲ್ಲಿ ನಡೆಸಿಕೊಂಡು ಹೋಗಬೇಕಾಗಿತ್ತು. ದಲಿತಪರವಿದ್ದ ಕೆಲವು ರೆಡ್ಡಿ ಮುಖಂಡರು ದಲಿತರಿಗೆ ತೊಂದರೆ ಕೊಡದಿರಲು ಸೂಚಿಸಿದರೂ ಪ್ರಯೋಜನವಾಗಲಿಲ್ಲ.

ಈ ಘಟನೆಗಳಿಗೆ ಒಂದು ತಕ್ಷಣದ ಹಿನ್ನೆಲೆ ಇತ್ತು. ಒಬ್ಬ ಮುದುಕ ರೆಡ್ಡಿ ತರಬೇತಿ ನಡೆಯುವ ಜಾಗಕ್ಕೆ ಬಂದು "ಏನು ತರಬೇತಿ ಮಾಡುತ್ತಿದ್ದೀರಿ" ಎಂದು ವಿಚಾರಿಸಿದ್ದರು. ಅದಕ್ಕೆ ಬೆಂಗಳೂರಿನಿಂದ ಬಂದ ಒಬ್ಬ ಕಾಲೇಜು ವಿದ್ಯಾರ್ಥಿ "ಬೀದಿನಾಟಕದ ಕೌಶಲ್ಯದ ತರಬೇತಿ ಪಡೆಯುತ್ತಿದ್ದೇವೆ" ಎಂದು ಉತ್ತರಿಸಿದ್ದ. "ಬೀದಿನಾಟಕದಿಂದ ಏನು ಮಾಡುತ್ತೀರಿ?" ಎಂಬುದು ನಂತರದ ಪ್ರಶ್ನೆ ರೆಡ್ಡಿಯಿಂದ. "ಬೀದಿನಾಟಕಗಳನ್ನು ಹಳ್ಳಿ ಜನರ ಮುಂದೆ ಪ್ರದರ್ಶಿಸುತ್ತೇವೆ" ಎಂಬುದು ಅದಕ್ಕೆ ಉತ್ತರ. "ಇದರಿಂದ ಏನನ್ನು ನೀವು ಸಾಧಿಸುತ್ತೀರಿ?" "ನಾವು ಜನರಿಗೆ ಅರಿವನ್ನು ಕೊಡುತ್ತೇವೆ. ಜನರು ಅಜ್ಞಾನದಲ್ಲಿ ಮುಳುಗಿದ್ದಾರೆ. ಅವರು ಹಲವಾರು ಮೌಢ್ಯಗಳನ್ನು ನಂಬಿದ್ದಾರೆ" ಎಂದು ವಿದ್ಯಾರ್ಥಿಯು ವಿವರಿಸಿದ್ದನು. ರೆಡ್ಡಿಯು "ನೀವು ಯಾವ ಅರ್ಥದಲ್ಲಿ ಇದನ್ನೆಲ್ಲಾ ಹೇಳುತ್ತಿದ್ದೀರಾ?" ಎಂದು ಕೇಳಿದ್ದಕ್ಕೆ ವಿದ್ಯಾರ್ಥಿಯು ಹಿಂದಿನ ವರ್ಷ ತುಮಕೂರಿನ ಒಂದು ಊರಲ್ಲಿ ಆ ಊರ ಜನರಿಗೆ ನಡೆಸಿದ ಒಂದು ಮುಖಂಡತ್ವದ ತರಬೇತಿಯಲ್ಲಿ ತಾನು ತಿಳಿದುಕೊಂಡ ಮೂಢನಂಬಿಕೆ ಮತ್ತು ಆಚರಣೆಯ ಉದಾಹರಣೆಯೊಂದನ್ನು ಕೊಟ್ಟಿದ್ದನು. ಕೃಷಿಕಾರ್ಮಿಕರು ಆ ದಿವಸ ಕೆಲಸಕ್ಕೆ ಹೋಗಬೇಕಾದರೆ ಬೆಳಿಗ್ಗೆ ಎದ್ದ ಕೂಡಲೇ ತೆಂಗಿನ ಮರವೊಂದನ್ನು ನೋಡಬೇಕಾಗಿತ್ತು. ಏಳಲು ತಡವಾಗಿ ಮುಂಜಾನೆ ತೆಂಗಿನ ಮರ ನೋಡಲಿಕ್ಕಾಗದಿದ್ದರೆ ಅವರು ಆ ದಿನ ಉಪವಾಸಕ್ಕಿರಬೇಕಾಗಿದ್ದರೂ ಕೆಲಸಕ್ಕೆ ಹೋಗುವ ಹಾಗಿರಲಿಲ್ಲ. ಈ ವಿವರಣೆ ಕೇಳಿದ್ದೇ ಆ ರೆಡ್ಡಿಯು ಕೋಪೋದ್ರಿಕ್ತನಾಗಿ "300 ವರ್ಷ ಮುಸ್ಲಿಮರು ನಮ್ಮನ್ನಾಳಿದರು. ಬ್ರಿಟಿಷರು ಇನ್ನೊಂದು 200 ವರ್ಷ ಆಳಿದರು. ಈಗ ಕ್ರೈಸ್ತರು ನಮ್ಮ ಸಂಸ್ಕೃತಿಯನ್ನು ಹಾಳುಗೆಡವುತ್ತಿದ್ದಾರೆ" ಎಂದು ಏರು ದನಿಯಲ್ಲಿ ಪ್ರತಿಕ್ರಿಯೆ ಕೊಟ್ಟಿದ್ದೇ ಅವನು ಅಲ್ಲಿಂದ ಹೊರಟನು. ಆ ಘಟನೆಯ ನಂತರವೇ ರೆಡ್ಡಿಜನರು ಶಾಲೆಯಲ್ಲಿ ತರಬೇತಿ ನಡೆಯದ ಹಾಗೆ ನೋಡಿಕೊಂಡಿದ್ದರು. ಹೀಗೆ ಯಾವುದೇ ಧಾರ್ಮಿಕ ಉದ್ದೇಶ ಇಲ್ಲದೇ ನಡೆಯುತ್ತಿದ್ದ ಜಾಗೃತೀಕರಣದ ಕಾರ್ಯಕ್ರಮವೊಂದನ್ನು ತಪ್ಪಾಗಿ ಅರ್ಥೈಸಿ ಅದಕ್ಕೆ ಮತೀಯ ಲೇಪನ ಕೊಟ್ಟು ಬಲಿಷ್ಠವರ್ಗದ ಕೆಲವು ಜನರನ್ನು ಭಾವೋದ್ರೇಕಗೊಳಿಸಿ ಅವಶ್ಯವಾಗಿ ಆಗಬೇಕಾಗಿರುವ ಜಾಗೃತಿ ಕೆಲಸವನ್ನು ಆರಂಭದಿಂದಲೇ ಚಿವುಟಿಹಾಕುವ ಪ್ರಯತ್ನವನ್ನು ಮಾಡಲಾಗಿತ್ತು.

ಮೇ ತಿಂಗಳ ಕೊನೆಗೆ ಇಬ್ಬರು ಅಗಸ ಮಹಿಳೆಯರು ಮತ್ತು ಮೂರು ಮಂದಿ ದಲಿತ ಕಾಲೇಜಿಗೆ ಹೋಗುವ ಯುವಕರ ಮಧ್ಯೆ ಒಂದು ಘರ್ಷಣೆ ಊರ ಹೊರಗೆ ಹೊಲಗಳ ಮಧ್ಯೆ ಇರುವ ಮುನೇಶ್ವರ ಗುಡಿಯ ಮುಂದೆ ನಡೆದಿತ್ತು. ಅಗಸ ಮಹಿಳೆಯರಲ್ಲಿ ಒಬ್ಬರು ಮುದುಕಿ, ಇನ್ನೊಬ್ಬರು ಬೇರೆ ಊರಲ್ಲಿ ಮದುವೆ ಮಾಡಿಕೊಟ್ಟಿದ್ದ ಅವರ ಮಗಳು. ಇಬ್ಬರೂ ಸೇರಿ ಗುಡಿಯಲ್ಲಿ ಪೂಜೆ ಮಾಡಲು ಬಂದಿದ್ದರು. ದಲಿತ ಯುವಕರು ಅಲ್ಲೇ ಓಡಾಡುತ್ತಿದ್ದರು. ಪೂಜೆ ಮುಗಿಸಿ ಪ್ರಸಾದವನ್ನು ಚೀಲಕ್ಕೆ ತುಂಬಿಸಿಕೊಳ್ಳುತ್ತಿದ್ದ ಮಹಿಳೆಯರನ್ನು ನೋಡಿ ತಮಗೆ ಒಂದು ತೆಂಗಿನ ಚಿಪ್ಪನ್ನು ಕೊಡುವಂತೆ ಅವರನ್ನು ಕೇಳಿದಾಗ ಮುದುಕಿಯು ಒಂದು ಚಿಪ್ಪನ್ನು ಅವರಿಗೆ ಕೊಟ್ಟಿದ್ದಳು. ತೆಂಗಿನ ಚಿಪ್ಪನ್ನು ಕೊಟ್ಟಿದ್ದಕ್ಕೆ ತಾಯಿಯನ್ನು ಮಗಳು ತರಾಟೆಗೆ ತೆಗೆದುಕೊಂಡು ಯುವಕರನ್ನು ಹೀನಾಯುವಾಗಿ ಬೈದಳು. ಯುವಕರು ಸುಮ್ಮನಿರದೇ ಮಹಿಳೆಯರನ್ನೂ ಅದೇ ರೀತಿ ತಿರುಗಿ ಬೈದರು. ಮಹಿಳೆಯರು ರೆಡ್ಡಿಯರಿಗೆ ಈ ವಿಷಯ ಮುಟ್ಟಿಸಿದ್ದರು. ದಲಿತರಿಗೆ ಬುದ್ಧಿ ಕಲಿಸಲು ಇದೇ ಸಕಾಲವೆಂದು ಯೋಚಿಸಿ ಮರುದಿನ ಬೆಳಿಗ್ಗೆ ವಿಚಾರಣೆಗೆ ದಲಿತ ಯುವಕರನ್ನು ಕರೆದಿದ್ದರು. ಒಬ್ಬ ಯುವಕನ ತಂದೆ ಮಾತ್ರ ತನ್ನ ಮಗನ ಜತೆಗೆ ವಿಚಾರಣೆಗೆ ಹೋಗಿದ್ದಾಗ ರೆಡ್ಡಿಯರು ಅವನನ್ನು ಥಳಿಸಿದರು. ಇದು ರೆಡ್ಡಿಯವರ ವಿಚಾರಣೆಯ ಪರಿಯಾಗಿತ್ತು! ಇನ್ನುಳಿದ ಇಬ್ಬರು ಯುವಕರು ವಿಚಾರಣೆಗೆ ಬರಲೊಪ್ಪದೇ ಊರಿಂದ ತಪ್ಪಿಸಿಕೊಂಡಿದ್ದರು. ರೆಡ್ಡಿಯರು ನಂತರ ಊರಲ್ಲಿ ದರ್ಜಿಯಾಗಿದ್ದ, ಒಬ್ಬ ಯುವಕನ ಅಣ್ಣನನ್ನು ವಿಚಾರಿಸಲು ಕರೆನೀಡಿದ್ದರು. ಅವರು ರೆಡ್ಡಿಯವರ ವಿಚಾರಣಾ ಕ್ರಮವನ್ನೇ ಪ್ರಶ್ನಿಸಿ ವಿಚಾರಣೆಗೆ ಅವರ ಮುಂದೆ ಹೋಗಲು ನಿರಾಕರಿಸಿದ್ದರು ಮಾತ್ರವಲ್ಲ ತಮ್ಮ ತಂದೆಯನ್ನೂ ಅಲ್ಲಿ ಹೋಗದಂತೆ ತಡೆದಿದ್ದರು. ಆಗ ರೆಡ್ಡಿ ಯುವಕರ ಒಂದು ಗುಂಪು ಹಗ್ಗ ಮತ್ತು ಲಾಠಿಗಳ ಸಮೇತ ಆ ದರ್ಜಿಯನ್ನು ಬಲಾತ್ಕಾರದಿಂದ ಹಿಡಿದುಕೊಂಡು ಹೋಗಲು ಬಂದಿದ್ದರು. ಆ ದಿವಸ ಬೆಳಿಗ್ಗೆ ಆನೇಕಲ್‌ನಲ್ಲಿ ಡಾ. ಸಿದ್ದಲಿಂಗಯ್ಯರವರ ಉಪಸ್ಥಿತಿಯಲ್ಲಿ ನಡೆಯಬೇಕಾಗಿದ್ದ ಆನೇಕಲ್‌ನ ದಲಿತ ಮುಖಂಡರಾಗಿದ್ದ ಜಿಗಣಿ ಶಂಕರ್ ಅವರನ್ನೊಳಗೊಂಡಂತೆ ಕೆಲ ದಲಿತ ದಂಪತಿಗಳ ಸಾಮೂಹಿಕ ಮದುವೆಗೆ ಆಗಲೇ ಊರಿನ ಹಲವಾರು ದಲಿತ ಯುವಕರು ತೆರಳಿದ್ದರು. ಊರಲ್ಲಿ ಉಳಿದಿದ್ದ ಕೆಲ ದಲಿತ ಯುವಕರು ದರ್ಜಿ ಅಂಗಡಿ ಮುಂದೆ ಸೇರಿದ್ದರು. ರೆಡ್ಡಿಯರು ಹಗ್ಗ, ಲಾಠಿ ಹಿಡಿದುಕೊಂಡಿದ್ದನ್ನು ನೋಡಿದ ಆ ದಲಿತ ಯುವಕರು ತಮ್ಮ ಮನೆಯಲ್ಲಿದ್ದ ಕೆಲವು ಕತ್ತಿಗಳನ್ನು ಕೈಗೆತ್ತಿಕೊಂಡು ಝಳಪಿಸಿ ಧೈರ್ಯವಿದ್ದರೆ ಹತ್ತಿರ ಬರುವಂತೆ ರೆಡ್ಡಿಯರನ್ನು ಆಹ್ವಾನಿಸಿದ್ದರು. ಆಗ ರೆಡ್ಡಿಯರು ಭಯಪಟ್ಟು ಹಿಂದಕ್ಕೆ ಹೋಗಿ ದಲಿತ ಯುವಕರು ತಮ್ಮನ್ನು ಕೊಲ್ಲಲು ಕತ್ತಿಗಳನ್ನು ಮಸೆಯುತ್ತಿದ್ದಾರೆಂದು ಊರಲ್ಲಿ ಗುಲ್ಲೆಬ್ಬಿಸಿದ್ದರು. ಆಗ ರೆಡ್ಡಿಯರ ದೊಡ್ಡ ಗುಂಪೊಂದು ಕತ್ತಿ, ಲಾಠಿ, ಹಗ್ಗಗಳನ್ನು ಹಿಡಿದುಕೊಂಡು ದಲಿತ ಕಾಲೊನಿಯಲ್ಲಿ ಜಮಾಯಿಸಲಿಕ್ಕೆ ತೊಡಗಿತ್ತು. ತಕ್ಷಣ ಊರಲ್ಲಿ ಉಳಿದಿದ್ದ ದಲಿತ ಯುವಕರು ಅಲ್ಲಿಂದ ತಪ್ಪಿಸಿಕೊಂಡು ಅವರಲ್ಲಿ ಕೆಲವರು ಆನೇಕಲ್‌ಗೆ ಬಂದು ತಮ್ಮ ಸ್ನೇಹಿತರಿಗೆ ನಡೆದ ಸಂಗತಿಗಳನ್ನು ಮುಟ್ಟಿಸಿದ್ದರು. ಈ ಘಟನಾವಳಿಗಳು ನಡೆಯುವ 3–4 ದಿನ ಮುಂಚೆಯೇ ನಾನು ಉಡುಪಿಗೆ ಒಂದು ಕಾರ್ಯಕ್ರಮದ ಮೇಲೆ ತೆರಳಿದ್ದು ಆ ದಿವಸ ಬೆಳಿಗ್ಗೆ ನೇರವಾಗಿ ಆನೇಕಲ್‌ಗೆ ಬಂದು ಸಾಮೂಹಿಕ ಮದುವೆಗೆ ಬರುವುದೆಂದು ಮುಂಚೆಯೇ ನಿರ್ಧಾರವಾಗಿದ್ದು ಸಭಿಕರ ಕುರ್ಚಿಯೊಂದರಲ್ಲಿ ಹಂದೇನಹಳ್ಳಿಯ ದಲಿತ ಯುವಕರೊಂದಿಗೆ ಕುಳಿತಿದ್ದೆ. ನಡೆದ ವಿಷಯಗಳು ನನ್ನ ಗಮನಕ್ಕೂ ಆಗ ಬಂದಿದ್ದವು. ವಿಷಯ ತಿಳಿದ ಮೇಲೆ ಸರ್ಜಾಪುರ ಪೊಲೀಸ್ ಸ್ಟೇಷನ್‌ನಲ್ಲಿ ಕೂಡಲೇ ದೂರು ಕೊಡಲು ಕೆಲ ದಲಿತ ಯುವಕರು ತೆರಳಿದ್ದರು. ಸಂಜೆ ಹೊತ್ತಿಗೆ ಅಲ್ಲಿ ಮುಟ್ಟಿದ್ದಾಗ ರೆಡ್ಡಿಯರು ಮತ್ತು ಮೂರು ಮಂದಿ ದಲಿತ ಯುವಕರ ತಂದೆಯಂದಿರು ಸ್ಟೇಷನ್‌ಗೆ ಆಗಲೇ ಬಂದು ರಾಜಿಮಾಡಿಕೊಂಡಿದ್ದಾರೆಂದು ಅವರಿಗೆ ತಿಳಿಯಿತು. ಏಕೆಂದರೆ ಅಷ್ಟರ ವರೆಗೆ ದಲಿತರ

ಯುವಕರಿಂದ ಯಾವುದೇ ದೂರು ದಾಖಲಾಗಿರಲಿಲ್ಲ. ಹಿಂದಿನ ದಿನದ ರೆಡ್ಡಿಯರ ವಿಚಾರಣೆಯಲ್ಲಿ ಮಗನನ್ನು ಕರಕೊಂಡು ಹೋಗಿ ರೆಡ್ಡಿಯರಿಂದ ಅವನನ್ನು ಹೊಡೆಯಿಸಿದ ಅವನ ತಂದೆಯೇ "ನಾನೇ ನನ್ನ ಮಗನ ಕೆಟ್ಟ ವರ್ತನೆಗೆ ಶಿಕ್ಷೆಯಾಗಿ ಅವನನ್ನು ಥಳಿಸಿದ್ದು; ಇದಕ್ಕೆ ರೆಡ್ಡಿಯಲ್ಲ್ಯಾರೂ ಕಾರಣರಲ್ಲ" ಎಂದು ಪೊಲೀಸರ ಮುಂದೆ ಹೇಳಿಕೊಂಡಿದ್ದರು.

ಈ ಘಟನಾವಳಿ ನಡೆದ ನಂತರ ರೆಡ್ಡಿಯರು ದಲಿತರನ್ನು ಇನ್ನೂ ಹೆಚ್ಚು ಬೆದರಿಸಲಿಕ್ಕೆ ಶುರು ಮಾಡಿದ್ದರು. ಅವರದ್ದೇ ಆದ ಒಂದು ಸಂಘವನ್ನು ಕಟ್ಟಿ ಮುಂದೆ ಸಂಭವಿಸಬಹುದಾದ ದಲಿತರ ಜೊತೆಗಿನ ಸಂಘರ್ಷದಲ್ಲಿ ಉಂಟಾಗಬಹುದಾದ ವ್ಯಾಜ್ಯಗಳನ್ನು ನಿಭಾಯಿಸಲು ಅಗತ್ಯವಾದ ಹಣವನ್ನು ಶೇಖರಿಸಲು ಆರಂಭಿಸಿದ್ದಾರೆಂಬ ವದಂತಿ ದಲಿತರಲ್ಲಿ ಹಬ್ಬುತ್ತಿತ್ತು.

ಇನ್ನೊಂದು ಘಟನೆಯೂ ಸ್ವಲ್ಪ ಹಿಂದೆ ನಡೆದಿತ್ತು. ದಲಿತ ಯುವಕರು ಸರ್ಜಾಪುರ ಪೊಲೀಸ್ ಸ್ಟೇಷನ್‌ನಲ್ಲಿ ತಮಗೆ ರೆಡ್ಡಿಯರು ಕಿರುಕುಳ ಕೊಡುತ್ತಿದ್ದಾರೆಂದು 10–12 ರೆಡ್ಡಿ ಹಿರಿಯರ ಮೇಲೆ ದೂರು ಕೊಟ್ಟಿದ್ದರು. ಹೊಸದಾಗಿ ಬಂದ ಸಬ್ ಇನ್ಸ್ಪೆಕ್ಟರ್‌ರವರು ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಪದವಿ ಮಾಡಿದ್ದು ಅವರ ಪರಿಚಯ ಮಾಡಿದಾಗ ನನ್ನ ಉದ್ದೇಶಗಳಿಗೆ ಸ್ಪಂದಿಸಿದ್ದರು; ಸಹಕಾರದ ಭರವಸೆ ನೀಡಿದ್ದರು. ರೆಡ್ಡಿಯರ ಮೇಲೆ ದೂರು ದಾಖಲಾದಾಗ ಕೂಡಲೇ ಆ ಹಿರಿಯರನ್ನು ಸ್ಟೇಷನ್‌ಗೆ ಕರೆಯಿಸಿ ದಲಿತರ ಜಾಗೃತಿ–ಸಂಘಟನಾ ಕೆಲಸಗಳಿಗೆ ಅಡ್ಡಿಬರಬಾರದೆಂದು ತಾಕೀತು ಹಾಕಿದ್ದರು. ಇದರ ಬಗ್ಗೆ ಸೇಡು ತೀರಿಸಿಕೊಳ್ಳಲೂ ರೆಡ್ಡಿಯರು ಬಯಸುತ್ತಿದ್ದಿರಬಹುದು. ಆದರೆ ಇದಾದ ಕೇವಲ ಒಂದು ವಾರದೊಳಗೆ ಸಬ್ ಇನ್ಸ್ಪೆಕ್ಟರ್‌ರವರನ್ನು ಸ್ಥಳಾಂತರ ಮಾಡಲಾಗಿತ್ತು. ಅವರ ಜಾಗದಲ್ಲಿ ಒತ್ತಡಕ್ಕೊಳಗಾಗಬಹುದಾದ ಅಧಿಕಾರಿಯೊಬ್ಬರು ಬಂದಿದ್ದರು.

ಹಂದೇನಹಳ್ಳಿಯ ದಲಿತರ ಮೇಲೆ ರೆಡ್ಡಿಯರಿಂದ ಸಾಮಾಜಿಕ ಬಹಿಷ್ಕಾರ

ಇದೆಲ್ಲಾ ಕಾರಣಗಳು ಒಟ್ಟುಗೂಡಿದರ ಪರಿಣಾಮವಾಗಿ **ರೆಡ್ಡಿಯರು ದಲಿತರ ಮೇಲೆ ಸಾಮಾಜಿಕ ಬಹಿಷ್ಕಾರವನ್ನು ಜುಲೈ 13ರಂದು ಹೇರಿದ್ದರು.** ಘೋಷಿಸಲ್ಪಟ್ಟ ಕಾರಣ, ದಲಿತರು ಕಿರಣರನ್ನು ಊರಿಂದ ಹೊರಗೆ ಹಾಕಬೇಕೆಂಬುದೇ ಆಗಿತ್ತು. ದಲಿತರ ಮೇಲಿನ ಯಾವುದೇ ಸಾಮಾಜಿಕ ಬಹಿಷ್ಕಾರದಂತೆ ದಲಿತರು ಹಲವಾರು ಕಿರುಕುಳ, ದೌರ್ಜನ್ಯಗಳನ್ನು ಎದುರಿಸಬೇಕಾಗಿತ್ತು. ಊರಲ್ಲಿರುವ ರೆಡ್ಡಿ ಒಡೆತನದ ಎರಡು ಹಿಟ್ಟಿನ ಗಿರಣಿಯ ಸೇವೆಯನ್ನು ದಲಿತರಿಗೆ ನಿರಾಕರಿಸಲಾಗಿತ್ತು. ದಲಿತರು ಬೆಳೆ ಕೊಯ್ದ ಹೊಲಗಳಲ್ಲಿ ಓಡಾಡುವುದನ್ನೂ ಅವುಗಳಲ್ಲಿ ತಮ್ಮ ದನಕರುಗಳನ್ನು ಮೇಯಿಸುವುದನ್ನೂ ನಿರ್ಬಂಧಿಸಲಾಗಿತ್ತು. ಅವರನ್ನು ದಿನಗೂಲಿಗೆ ಕರೆಯುವುದನ್ನೂ ನಿಲ್ಲಿಸಿದ್ದರು. ಅಷ್ಟು ಮಾತ್ರವಲ್ಲ; ತಮ್ಮ ಸುತ್ತಮುತ್ತಲಿರುವ ಊರಲ್ಲಿರುವ ರೆಡ್ಡಿಯರೂ ತಮ್ಮನ್ನು ಅನುಕರಿಸುವಂತೆ ಅವರನ್ನು ಪ್ರೇರೇಪಿಸಿದ್ದರು.

ಸಾಮಾಜಿಕ ಬಹಿಷ್ಕಾರ ಜಾರಿಯಲ್ಲಿದ್ದ ನಾಲ್ಕು ದಿನಗಳಲ್ಲಿ ಒಮ್ಮೆ ನ್ಯಾಯಯುತವಾಗಿ ಪಕ್ಕದ ಊರಿನಿಂದ ಮೇವನ್ನು ಖರೀದಿಸಿ ತಂದಿದ್ದಕ್ಕಾಗಿ ಒಬ್ಬ ದಲಿತರನ್ನು ರೆಡ್ಡಿಯರು ಹೊಡೆದುಹಾಕಿದ್ದರು. ಊರ ಕಟ್ಟೆ ಮೇಲೆ ಕುಳಿತುಕೊಂಡಿದ್ದಕ್ಕಾಗಿ ಇನ್ನೊಬ್ಬ ದಲಿತ ಯುವಕನನ್ನು ಥಳಿಸಿದ್ದರು. ಇವೆಲ್ಲಾ ಘಟನೆಗಳನ್ನು ಪೊಲೀಸರಿಗೆ ಮುಟ್ಟಿಸಿದಾಗ ಆನೇಕಲ್‌ನಲ್ಲಿರುವ ಸರ್ಕಲ್ ಇನ್ಸ್ಪೆಕ್ಟರ್‌ರವರು ಎರಡು ಕೋಮುಗಳು ರಾಜಿ ಮಾಡಿಕೊಳ್ಳುವಂತೆ ಜುಲೈ 16ರಂದು ತಹಶೀಲ್ದಾರರು ಹಂದೇನಹಳ್ಳಿಗೆ ಹೋಗುವಂತೆ ನೋಡಿಕೊಂಡಿದ್ದರು. ಎರಡೂ ಕಡೆಯಿಂದ ವಿವರಗಳನ್ನು ಕಲೆಹಾಕಿದ ಮೇಲೆ, ಎರಡೂ ಗುಂಪಿನವರು ಹೊಂದಾಣಿಕೆಗೆ ಬರುವಂತೆ ಅವರಿಗೇ ಬಿಟ್ಟುಕೊಟ್ಟಿದ್ದರು. ಕಿರಣರನ್ನು ಊರಿಂದ ಕಳುಹಿಸಿಕೊಡಬೇಕೆಂದು ರೆಡ್ಡಿಯರು ಪಟ್ಟು ಹಿಡಿದಿದ್ದರು. ಆದರೆ ಅವರ

ನಿಲುವಿಗೆ ಸಕಾರಣಗಳನ್ನು ಕೊಡಲು ಅವರು ತಯಾರಿರಲಿಲ್ಲ. ದಲಿತ ಯುವಕರು ಅವರ ನಿಲುವನ್ನು ಪ್ರಬಲವಾಗಿ ವಿರೋಧಿಸಿದ್ದರು. ಹೀಗೆ ಸುಮಾರು ಎರಡು ಗಂಟೆಗಳ ಕಾಲದ ವಿವಾದದ ನಂತರ ಒಬ್ಬ ಹಿರಿಯ ದಲಿತರು ತಾವು ರೆಡ್ಡಿಯವರ ಒತ್ತಾಯವನ್ನು ಒಪ್ಪಿಕೊಳ್ಳುತ್ತೇವೆ ಎಂದು ಹೇಳಿದ್ದೇ ಎಲ್ಲಾ ದಲಿತರ ಅಭಿಪ್ರಾಯವಿರಬೇಕೆಂಬ ತೀರ್ಮಾನಕ್ಕೆ ಅಧಿಕಾರಿಗಳು ಬಂದಿದ್ದರು.

ಜುಲೈ 16ರಂದು ಕೊನೆಗೊಂಡ ಮಾತುಕತೆ ಬಗ್ಗೆ ಬೇಸರಗೊಂಡ ದಲಿತ ಯುವಕರು ಎ.ಎಸ್.ಪಿ., ಎಸ್.ಪಿ., ಡಿ.ಐ.ಜಿ. ಮುಂತಾದ ಪೊಲೀಸ್ ವರಿಷ್ಠ ಅಧಿಕಾರಿಗಳನ್ನು ಭೇಟಿಯಾಗಿ ತಮಗೆ ನ್ಯಾಯಕೊಡಿಸಬೇಕೆಂದು ಕೇಳಿಕೊಂಡಿದ್ದರು. ಪೊಲೀಸ್ ಅಧಿಕಾರಿಗಳು ದಲಿತ ಯುವಕರಿಗೆ ಸಹಾನುಭೂತಿ ತೋರಿಸಿ ತಮ್ಮ ಸಹಕಾರದ ಭರವಸೆಯನ್ನು ನೀಡಿದ್ದರು. ಎ.ಎಸ್.ಪಿ.ಯವರು ಆಗಸ್ಟ್ 7ರಂದು ಊರಿಗೆ ಭೇಟಿಯಾಗಿ ಭಾರತೀಯನೊಬ್ಬನನ್ನು ಯಾವುದೇ ಪ್ರದೇಶಕ್ಕೆ ಹೋಗುವುದನ್ನೂ ಮತ್ತು ಎಲ್ಲಿಯೇ ವಾಸವಾಗಿರುವುದನ್ನೂ ನಿರ್ಬಂಧಿಸಲು ರೆಡ್ಡಿಯರಿಗೆ ಹಕ್ಕಿಲ್ಲವೆಂದು ರೆಡ್ಡಿಯರಿಗೆ ಸ್ಪಷ್ಟಮಾತುಗಳಲ್ಲಿ ಹೇಳಿದ್ದರು. ಯಾವುದೇ ವ್ಯಕ್ತಿ ವಿರುದ್ಧ ಅವರಿಗೆ ಏನಿದ್ದರೂ ಅವರು ಪೊಲೀಸರಿಗೆ ದೂರು ಕೊಡುವುದನ್ನು ಬಿಟ್ಟು ದೌರ್ಜನ್ಯಕ್ಕಿಳಿದರೆ ಅದರ ಬಗ್ಗೆ ತೀವ್ರ ಕ್ರಮ ಕೈಗೊಳ್ಳಲಾಗುವುದೆಂದು ಅವರಿಗೆ ಎಚ್ಚರಿಕೆ ನೀಡಿದ್ದರು. ಹೀಗಿದ್ದರೂ ರೆಡ್ಡಿಯರು ತಮ್ಮ ನಡವಳಿಕೆಯನ್ನು ತಿದ್ದಿಕೊಂಡಿರಲಿಲ್ಲ.

ನನ್ನನ್ನು ಊರ ಹೊರಗೆ ತಳ್ಳಿದ್ದು
ಮತ್ತದರ ಕುರಿತು ಎಸ್.ಪಿ. ಶ್ರೀಮತಿ ಪ್ರಭಾ ರಾವ್‌ರವರ ಸೂಕ್ಷ್ಮ ಗ್ರಹಿಕೆಗಳು

ಆಗಸ್ಟ್ 11ರಂದು ಮಧ್ಯಾಹ್ನ ಸುಮಾರು 1.30 ಗಂಟೆಗೆ ನಾನು ಹೊರಗಿನಿಂದ ಬಂದು ಊರೊಳಗೆ ನಡೆದು ದಲಿತ ಕಾಲೊನಿಗೆ ಇನ್ನೇನು ಹೆಜ್ಜೆಯನ್ನಿಡಬೇಕೆನ್ನುವಷ್ಟರಲ್ಲಿ 6–7 ಮಂದಿ ರೆಡ್ಡಿ ಬಲಿಷ್ಠ ಯುವಕರು ನನ್ನನ್ನು ತಡೆದು ದಲಿತ ಕಾಲೊನಿಗೆ ಹೋಗಬಾರದೆಂದು ತಾಕೀತು ಮಾಡಿದ್ದರು. ಹೆದರಿಕೆಯಿಂದ ಕಾಲು ನಡುಗುತ್ತಿದ್ದರೂ ಧೈರ್ಯ ತೆಗೆದುಕೊಂಡು ಅವರನ್ನು ಸೆಟೆದು ನಿಂತಿದ್ದೆ. "ನಾನು ಹೋಗಬೇಕೆಂದಲ್ಲಿ ಅಥವಾ ಜನರು ನನ್ನನ್ನು ಬಯಸಿ ಬರಮಾಡಿದ್ದಲ್ಲಿ ಹೋಗುವುದು ನನ್ನ ಹಕ್ಕು. ನೀವ್ಯಾರು ನನ್ನನ್ನು ತಡೆಯಲು?" ಎಂದು ಅವರಿಗೆ ಸವಾಲು ಹಾಕಿದ್ದೆ. ಬೇರೆ ರೆಡ್ಡಿ ಜನರು – ಗಂಡಸರು, ಹೆಂಗಸರು ಸೇರಲಾರಂಭಿಸಿದ್ದರು. ಹಲವಾರು ಹಿರಿಯರೂ ಮುಖಂಡರೂ ಸೇರಿಕೊಂಡು ಪಕ್ಕದಲ್ಲೇ ಇದ್ದ ಈಶ್ವರ ಗುಡಿಯ ಜಗುಲಿಯಲ್ಲಿ ನೆರೆದಿದ್ದರು. ಅವರೂ ಊರ ಹೊರಗೆ ಹೋಗುವಂತೆ ನನ್ನನ್ನು ಸಮಜಾಯಿಸಿದ್ದರು. ಅರ್ಧ ಗಂಟೆಯೊಳಗೆ 500–600 ಮಂದಿ ರೆಡ್ಡಿಯರು ಕೂಡಿಕೊಂಡಿದ್ದರು. ಹೆಚ್ಚಿನ ದಲಿತ ಗಂಡಸರು, ಯುವಕರು ಕೆಲಸಕ್ಕೆ ಹೋಗಿದ್ದರಿಂದ ಊರಲ್ಲಿರಲಿಲ್ಲ. ಕೆಲವು ದಲಿತ ಮಹಿಳೆಯರು, ಮಕ್ಕಳು ಮಾತ್ರ ರಸ್ತೆ ಪಕ್ಕಕ್ಕೆ ಬಂದು ನಿಂತಿದ್ದರು. ಒಬ್ಬ ದಲಿತ ಯುವಕ ಸೈಕಲಲ್ಲಿ ದಲಿತ ಕೇರಿ ಪಕ್ಕದಿಂದ ಹೊರಟಿರುವುದನ್ನು ಗಮನಿಸಿದ್ದೆ. ಪೊಲೀಸ್ ಸ್ಟೇಷನಿಗೆ ಹೋಗುತ್ತಿದ್ದಾನೆಂದು ಊಹಿಸಿದ್ದೆ. ಸಬ್‌ಇನ್ಸ್‌ಪೆಕ್ಟರರು ಇನ್ನೇನು ಬರಲಿಕ್ಕಿದ್ದಾರೆನ್ನುಷ್ಟರಲ್ಲಿ ನನಗೆ ಮುತ್ತಿಗೆಹಾಕಿ ನೆರೆದಿದ್ದ ರೆಡ್ಡಿ ಗುಂಪು ಅತಿ ನಿಕಟಕ್ಕೆ ಬಂದು ನನ್ನನ್ನು ತಳ್ಳಲಾರಂಭಿಸಿತ್ತು. ಆ ಹೊತ್ತಿಗೆ ಒಬ್ಬ ರೆಡ್ಡಿ ಯುವಕ ನನ್ನನ್ನು ಹೀಯಾಳಿಸಿ ಕಾಲಿನಿಂದ ಒಂದೇ ಸಾರಿ ನನ್ನನ್ನು ಒದ್ದಿದ್ದ. ನನಗೆ ತಡೆಯಲಾರದ ಅವಮಾನವೆನಿಸಿತ್ತು. ಊರ ಹೊರಗಿನ ಸುಮಾರು 1.5 ಕಿ.ಮೀ.ರಷ್ಟಿರುವ ರಸ್ತೆಯುದ್ದಕ್ಕೂ ನನ್ನನ್ನು ತಳ್ಳಿ ತಳ್ಳಿ ಊರ ಹೊರ ನಡೆಯುವಂತೆ ಮಾಡಿದ್ದರು. ಮತ್ತು ಇನ್ನೆಂದೂ ಊರೊಳಗೆ ಬಾರದಿರುವಂತೆ ಬೆದರಿಸಿದ್ದರು. ನಾನು ಪಕ್ಕದ ಊರಿನಿಂದ ಸಂಜೆ ಹೊತ್ತಿನ ಬಸ್ಸೊಂದರಲ್ಲಿ ಕುಳಿತು "ಮುಂದೇನು ಮಾಡುವುದು? ಈ ಪರಿಸ್ಥಿತಿಯನ್ನು ಹೇಗೆ ನಿಭಾಯಿಸುವುದು"? ಎಂದು ಚಿಂತಿಸುತ್ತಾ ಕೆಲವು ಹಿತಚಿಂತಕರೊಡನೆ ಸಮಾಲೋಚಿಸಲು ಬೆಂಗಳೂರಿಗೆ ಹೊರಟೆ.

ಮುಂದಿನ ದಾರಿಯ ಯೋಚನೆಯಲ್ಲಿ

ಸಂಜೆ ಹೊತ್ತಿಗೆ ನನಗೆ ಹಿತಚಿಂತಕರಾಗಿರಬೇಕಿದ್ದ ಸಮಾಜ ಕಾರ್ಯದಲ್ಲಿ ಹಲವಾರು ವರ್ಷ ತಮಿಳುನಾಡಿನಲ್ಲಿ ತೊಡಗಿದ್ದ ಕರ್ನಾಟಕದವರೇ ಆಗಿದ್ದ ಒಬ್ಬರು ನನಗೆ ಹಿತವಚನ ನೀಡುವ ಬದಲು ಉದ್ದೇಶಿತ ಜನಸಮುದಾಯದೊಡನಿದ್ದು ಜಾಗೃತಿ–ಸಂಘಟನೆ ಮಾರ್ಗದ ಔಚಿತ್ಯದ ಬಗ್ಗೆ ನನ್ನನ್ನು ಪ್ರಶ್ನಿಸಿ ಈಗಲಾದರೂ ಅದನ್ನು ಬಿಟ್ಟು ಅವರ ಸಾಂಸ್ಥಿಕ ದಾರಿಯಲ್ಲಿ ನಡೆಯುವಂತೆ ಯಾವಾಗಲೂ ನೀಡುತ್ತಿದ್ದ ಕರೆಯನ್ನು ಪುನರುಚ್ಚರಿಸಿದ್ದರು. ಅವರ ಭೇಟಿಯಿಂದ ಏನೂ ಪ್ರಯೋಜನವಾಗಿರಲಿಲ್ಲ. ಮರುದಿನ ಇನ್ನೊಬ್ಬರು ತಮಿಳುನಾಡಿನವರಾಗಿದ್ದು ಅಲ್ಲಿ ತಳಮಟ್ಟದಲ್ಲಿ ಜಾಗೃತಿ–ಸಂಘಟನೆಯ ಮಾರ್ಗದಲ್ಲಿ ಹಲವಾರು ವರ್ಷ ವಿಶಿಷ್ಟ ಸಾಧನೆ ಮಾಡಿದವರಾಗಿದ್ದು ಈಗ ಕೆಲವು ವರ್ಷಗಳ ಮಟ್ಟಿಗೆ ಕರ್ನಾಟಕದಲ್ಲಿ ಸೇವೆ ಸಲ್ಲಿಸುತ್ತಿದ್ದ ಮತ್ತು ವಿದ್ಯಾಭ್ಯಾಸದ ಸಮಯದಲ್ಲಿ ಹಿರಿಯ ಸಹಪಾಠಿಯಾಗಿದ್ದ ಮಿತ್ರರೂ ಹಿತಚಿಂತಕರೂ ಆಗಿದ್ದವರನ್ನು ಭೇಟಿಯಾಗಿ ಹಂದೇನಹಳ್ಳಿಯಲ್ಲಿ ನಡೆದ ಘಟನಾವಳಿಗಳನ್ನು ವಿವರಿಸಿದ್ದೆ. ಅವರ ಪ್ರತಿಕ್ರಿಯೆಯು ಅದ್ಭುತವೂ ಉತ್ತೇಜನಕಾರಿಯೂ ಮುಂದೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸ್ಪಷ್ಟ ಬೆಳಕು ಚೆಲ್ಲುವಂತಹದ್ದೂ ಆಗಿತ್ತು. "ಯಾವುದೇ ಜಾಗೃತಿ–ಸಂಘಟನೆಯ ಕಾರ್ಯದಲ್ಲಿ ವಿರೋಧವು ಇದ್ದೇ ಇರುತ್ತದೆ. ಕೆಲವು ಸಂದರ್ಭಗಳಲ್ಲಿ ವಿಳಂಬಿತವಾಗಿಯೂ ಕೆಲವು ಸಾರಿ ಅತಿ ಆರಂಭದಲ್ಲೇ ಅದನ್ನು ಎದುರಿಸಬೇಕಾಗುತ್ತದೆ. ಅದರ ಬಗ್ಗೆ ಎದೆಗುಂದುವ ಅಥವಾ ದಿಗಿಲಾಗುವ ಪ್ರಶ್ನೆಯೇ ಇರಬಾರದು. ಈಗ ಯೋಚಿಸಬೇಕಾದ ಒಂದೇ ಒಂದು ಸೂಕ್ತ ವಿಷಯವೆಂದರೆ ಬಂದ ವಿರೋಧವನ್ನು ಜನಸಂಘಟನೆಗೆ ಪರಿಣಾಮಕಾರಿಯಾಗಿ ಬಳಸುವುದು ಹೇಗೆ?" ಎಂಬುದು ಅವರ ಪ್ರತಿಕ್ರಿಯೆಯೂ ಸಲಹೆಯೂ ಆಗಿತ್ತು. ಈ ಮಾರ್ಗದರ್ಶನ ಸಮಾಧಾನಕರವಾಗಿದ್ದು ಮನಸ್ಸನ್ನು ತಿಳಿಗೊಳಿಸಿ ಧೈರ್ಯಕೊಡುವಂತಹದ್ದಾಗಿತ್ತು. ಜಾಗೃತಿ–ಸಂಘಟನೆ ಬಗ್ಗೆ ನನ್ನಲ್ಲಿ ಸ್ಪಷ್ಟ ಕಲ್ಪನೆ ಮೂಡಲು ಕಾರಣಕರ್ತರೂ ಸಮಾಜ ವಿಶ್ಲೇಷಣೆ ಕುರಿತು ನನ್ನ ತರಬೇತುದಾರರೂ ಆಗಿದ್ದ ಇನ್ನೊಬ್ಬ ಹಿರಿಯ ಹಿತಚಿಂತಕರು ಕಾರ್ಮಿಕ ಸಂಘಟನಾ ನುರಿತರೂ ಕಾರ್ಮಿಕ ಕಾನೂನು ಹಾಗೂ ಮಾನವ ಹಕ್ಕುಗಳ ಬಗ್ಗೆ ಪ್ರಖಂಡ ಪಂಡಿತರೂ ಆಗಿದ್ದವರೊಬ್ಬರನ್ನು ಪರಿಚಯ ಮಾಡಲು ಸಲಹೆ ನೀಡಿದ್ದರು. ಇನ್ನಿತರ ಪ್ರಗತಿಪರರ ಪರಿಚಯ ಹೇಳಿಕೊಟ್ಟಿದ್ದರು. ದಲಿತ ಚಿಂತನೆಯಲ್ಲಿ ತೊಡಗಿರುವವರೂ ತೀವ್ರಗಾಮಿ ದಲಿತ ಸಂಘಟನೆಯ ಪ್ರತಿಪಾದಕರೂ ಆಗಿದ್ದ ಇನ್ನೊಬ್ಬ ಹಿತಚಿಂತಕರು, ಮೂಲ ದಲಿತ ಸಂಘರ್ಷ ಸಮಿತಿಯಿಂದ ಹೊರನಡೆದು ಸ್ವತಂತ್ರ ಸಂಘಟನೆಯನ್ನು ಕಟ್ಟುತ್ತಿದ್ದ ಒಬ್ಬ ದಲಿತ ನಾಯಕ ಮತ್ತವರ ಮಿತ್ರರನ್ನು ಭೇಟಿಮಾಡುವಂತೆ ಮಾರ್ಗದರ್ಶನವಿತ್ತಿದ್ದರು. ಹೀಗೆ ಒಂದು ವಾರಕ್ಕೂ ಹೆಚ್ಚಾಗಿ ಪ್ರಗತಿಪರರ, ಸಂಘಟನಾಚತುರರ ಪರಿಚಯ ಮಾಡುವುದರಲ್ಲೇ ಕಾಲ ಕಳೆಯಿತು. ಪ್ರತಿದಿನವೆಂಬಂತೆ ಹಂದೇನಹಳ್ಳಿಯಿಂದ ದಲಿತ ಯುವಕರು ಬಂದು ಊರಲ್ಲಿ ದಲಿತರ ವಿರುದ್ಧ ನಡೆಯುತ್ತಿದ್ದ ಘಟನೆಗಳನ್ನು ನನಗೆ ವಿವರಿಸುತ್ತಿದ್ದರು. ಆ ಯುವಕರು ಬೆಂಗಳೂರಿನಲ್ಲಿರುವ ಉನ್ನತ ಪೊಲೀಸ್ ಅಧಿಕಾರಿಗಳನ್ನೂ ಭೇಟಿಯಾಗಿ ಹಂದೇನಹಳ್ಳಿಯಲ್ಲಿ ದಲಿತರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳ ಬಗ್ಗೆ ಮಾಹಿತಿ ಕೊಟ್ಟು ಅವರಿಂದ ರಕ್ಷಣೆ ಬಯಸುತ್ತಿದ್ದರು.

ಹೀಗಿರುವಾಗ **ಆಗಸ್ಟ್ 19ರಂದು ಶ್ರೀಮತಿ ಪ್ರಭಾ ರಾವ್‌ರವರು ಹಂದೇನಹಳ್ಳಿಗೆ ಹೋಗಿ** ನಿಜ ಸ್ಥಿತಿಯನ್ನು ಖುದ್ದಾಗಿ ಅರ್ಥಮಾಡುವ ನಿರ್ಧಾರಕ್ಕೆ ಬಂದು ಆ ಗ್ರಾಮಕ್ಕೆ ಭೇಟಿಕೊಟ್ಟಿದ್ದರು. ನನಗೆ ವಿಷಯ ಮುಟ್ಟಿಸಿ ನಾನೂ ಊರಿಗೆ ಬರುವಂತೆ ನೋಡಿಕೊಂಡಿದ್ದರು. ರೆಡ್ಡಿಯರು ಇನ್ನು ಮುಂದೆ ದಲಿತರ ಮೇಲೂ ಕಿರಣರ ಮೇಲೂ ಯಾವುದೇ ಕಿರುಕುಳ, ದೌರ್ಜನ್ಯ ಎಸಗದಂತೆ ಅವರಿಗೆ ಎಚ್ಚರಿಕೆ ನೀಡಿದ್ದರು. ದಲಿತ ಯುವಕರು ಆತ್ಮಸ್ಥೈರ್ಯದಿಂದ ತಮ್ಮ ಹಕ್ಕುಗಳನ್ನು ಪಡೆಯುವ ತನಕ ಹೋರಾಡಬೇಕೆಂದು ಅವರಿಗೆ ಸಲಹೆ ಕೊಟ್ಟಿದ್ದರು. ಕಿರಣರು ಹಂದೇನಹಳ್ಳಿಗೆ

ತೊಂದರೆಯಿಲ್ಲದೆ ಮರಳಿ ಅಲ್ಲಿ ವಾಸಿಸುವಂತೆ ನೋಡಿಕೊಂಡಿದ್ದರು. ಇಬ್ಬರು ಪೊಲೀಸ್ ಕಾನ್ಸ್ಟೇಬಲರು ಅಲ್ಲಿ ದಿನನಿತ್ಯ ಇದ್ದು ರಕ್ಷಣೆ ಕೊಡುವಂತೆ ನೋಡಿಕೊಂಡಿದ್ದರು. ನಂತರ ಅವರ ಸಮ್ಮುಖದಲ್ಲಿ ನಡೆದ ಸಂಭಾಷಣೆಯ ವಿವರಗಳನ್ನು ಈ ಪ್ರಬಂಧದ ಆರಂಭದಲ್ಲೇ ನೀಡಿದ್ದೇನೆ. ಆಗಸ್ಟ್ 19ರ ಕೆಲ ದಿನಗಳ ನಂತರ ಅವರ ಕಛೇರಿಯಲ್ಲಿ ಅವರೊಂದಿಗೆ ನಡೆದ ಮಹತ್ವದ ಸಂಭಾಷಣೆಯನ್ನು ತದನಂತರ ನೀಡಿದ್ದೇನೆ.

ಹಂದೇನಹಳ್ಳಿಯ ದಲಿತರ ಮೇಲೆ ಇನ್ನೂ ಮುಂದುವರಿದ ದೌರ್ಜನ್ಯಗಳು ಹಾಗೂ ನಡೆದ ರಾಜಿ ಸೂತ್ರಗಳು

ಆದರೆ ರೆಡ್ಡಿಯರ ದೌರ್ಜನ್ಯಕ್ಕೆ ತಡೆ ಬಂದಿರಲಿಲ್ಲ. ಆಗಸ್ಟ್ 19ರ ಮರುದಿನವೇ ಎಂಬಂತೆ ಊರಿನ ಸಾರ್ವಜನಿಕ ರಸ್ತೆಯಲ್ಲಿ ನಡೆದುಹೋಗುತ್ತಿದ್ದ ಮೂರು ದಲಿತ ಯುವಕರ ಮೇಲೆ ಹಲ್ಲೆ ನಡೆಸಿದ್ದರು. ದಲಿತ ಯುವಕನೊಬ್ಬನ ತಾಯಿಯನ್ನು ಹೊಡೆದುಹಾಕಿದ್ದರು. ಆಗಸ್ಟ್ 21ರಲ್ಲಿ ಬೆಂಗಳೂರು-ಹಂದೇನಹಳ್ಳಿಯ ನಡುವೆ ಕೆ.ಎಸ್.ಆರ್.ಟಿ.ಸಿ. ಬಸ್ ಚಲಾಯಿಸುತ್ತಿದ್ದ ಊರವನೇ ಆಗಿದ್ದ ರೆಡ್ಡಿ ಚಾಲಕನೊಬ್ಬನು ಊರಿನಿಂದ ಸುಮಾರು 20 ಕಿ.ಮೀ. ದೂರವಿರುವ ಕೊಡತಿ ಗೇಟ್‌ನಲ್ಲಿ ರಾತ್ರಿ 8 ಗಂಟೆಗೆ ಊರಿಗೆ ಬರಲು ಬಸ್‌ಗೆ ಕಾಯುತ್ತಿದ್ದ 14 ಮಂದಿ ದಲಿತ ದಿನಗೂಲಿಗಳನ್ನು ಬಸ್ ಹತ್ತಲು ಬಿಟ್ಟಿರಲಿಲ್ಲ. ಅಲ್ಲಿಂದ ಆಗಸ್ಟ್ 30ರ ತನಕವೂ ರಾತ್ರಿ ಹೊತ್ತು ದಲಿತ ಮನೆಗಳ ಮೇಲೆ ಅವರನ್ನು ಹೆದರಿಸಲು ಅವರ ಮನೆಗಳ ಮೇಲೆ ಕಲ್ಲು ತೂರುತ್ತಾ ಬರುತ್ತಿದ್ದರು. ದಲಿತರ ಮತ್ತು ಕಿರಣರ ಕಾಲು ಕೈಗಳನ್ನು ಮುರಿದು ಹಾಕುತ್ತೇವೆ ಎಂಬ ಬೆದರಿಕೆಗಳೂ ನಿರಂತರವಾಗಿ ಅವರಿಂದ ಬರುತ್ತಿದ್ದವು. ಪೊಲೀಸರ ಸಮಕ್ಷಮದಲ್ಲೇ ಇದೆಲ್ಲಾ ನಡೆಯುತ್ತಿತ್ತು.

ಆಗಸ್ಟ್ 26ರಂದು ಆಗಿನ ಎಮ್.ಎಲ್.ಎ. ಆಗಿದ್ದ ಸ್ಥಳೀಯ ಶಾಸಕರು ಊರಲ್ಲಿ 'ಶಾಂತಿ ಸಭೆ'ಯೊಂದನ್ನು ಕರೆದರು. ಸಭೆಯಲ್ಲಿ ಹಲವಾರು ಮಂದಿ ರೆಡ್ಡಿಯರು ಸೇರಿದ್ದರೆ ಕೇವಲ ಎಂಟು ಮಂದಿ ದಲಿತ ಹಿರಿಯರು ಮಾತ್ರ ಅಲ್ಲಿ ಹಾಜರಿದ್ದರು. ಊರಲ್ಲಿ ನಡೆದಿರುವ ಘಟನೆಗಳು, ಅವುಗಳಿಗೆ ಕಾರಣಗಳು ಮುಂತಾದ ವಿಷಯಗಳ ಬಗ್ಗೆ ವಿಚಾರಿಸದೇ ಒಂದು ಮುಚ್ಚಳಿಕೆ ಪತ್ರವನ್ನು ಬರೆಯಿಸಿದ್ದರು. "ಇನ್ನು ಮುಂದೆ ಊರಿನ ರೆಡ್ಡಿಯರೂ ದಲಿತರೂ ಶಾಂತಿಯುತವಾಗಿ ಜೀವಿಸುತ್ತೇವೆ; ಕೋಮು ಸೌಹಾರ್ದ ಹದಗೆಡುವ ಯಾವುದೇ ವ್ಯಕ್ತಿಯನ್ನು ಊರೊಳಗೆ ಬರುವುದನ್ನು ನಿರ್ಬಂಧಿಸಲಾಗುವುದು" ಎಂಬುದು ಅದರಲ್ಲಿಯ ಒಕ್ಕಣೆಯಾಗಿತ್ತು. ಅಷ್ಟೇ ಅಲ್ಲದೇ "ಕಿರಣರಿಗೆ ಊರಿಗೆ ಬರಲು ಯಾವುದೇ ಹಕ್ಕಿಲ್ಲ; ನಾನೇ ಖುದ್ದಾಗಿ ಕಿರಣರು ಊರಿಗೆ ಬರದ ಹಾಗೆ ನೋಡಿಕೊಳ್ಳುತ್ತೇನೆ" ಎಂದು ಶಾಸಕರು ಬಹಿರಂಗವಾಗಿ ಹೇಳಿಕೆ ಕೊಟ್ಟಿದ್ದರು.

ಆಗಸ್ಟ್ 29ರಂದು ರಾಜ್ಯದ ಸಮಾಜ ಕಲ್ಯಾಣ ಮಂತ್ರಿಗಳು ಉನ್ನತ ಪೊಲೀಸ್ ಅಧಿಕಾರಿಗಳು (ಸಿ.ಆರ್.ಇ. ಸೆಲ್‌ನ ಡಿ.ಐ.ಜಿ., ಕೇಂದ್ರ ವಲಯದ ಡಿ.ಐ.ಜಿ., ಎಸ್.ಪಿ, ಎ.ಎಸ್.ಪಿ, ಸಿ.ಐ. ಮತ್ತು ಎಸ್.ಐ.ಗಳು) ಮತ್ತು ತಾಲೂಕಿನ ಆಡಳಿತಾಧಿಕಾರಿಗಳು ಮತ್ತಿತರ ಹಿರಿಯ ಅಧಿಕಾರಿಗಳ ಸಮ್ಮುಖದಲ್ಲಿ ಊರಲ್ಲಿ ಒಂದು ರಾಜಿಸೂತ್ರ ತರುವಂತೆ ಪ್ರಯತ್ನಿಸಿದ್ದರು. ಎರಡೂ ಕಡೆಯವರನ್ನು ಪ್ರತ್ಯೇಕವಾಗಿ ವಿಚಾರಿಸಿದ್ದರು. ವಿಷಯಗಳನ್ನು ತಿಳಿದ ಸಚಿವರು ಒಂದು ಸೂತ್ರ ಸೂಚಿಸಿದ್ದರು. ನಾನು ಒಂದು ತಿಂಗಳು ಊರ ಹೊರಗಿರಬೇಕಾಗಿಯೂ ತದನಂತರ ಅವರೇ ಖುದ್ದಾಗಿ ನನ್ನನ್ನು ಊರೊಳಗೆ ಕರೆತರುವುದಾಗಿಯೂ ನನ್ನನ್ನು ಕೇಳಿಕೊಂಡಿದ್ದರು. ಅಷ್ಟೇ ಅಲ್ಲ ದಲಿತರಿಗೆ ಅವರ ಏಳಿಗೆಗೆ ಹಲವಾರು ಯೋಜನೆಗಳನ್ನು ಮಂಜೂರು ಮಾಡುವುದಾಗಿಯೂ ಭರವಸೆ ನೀಡಿದ್ದರು. ಉನ್ನತ ಅಧಿಕಾರಿಗಳು, ಪ್ರತ್ಯೇಕವಾಗಿ ದಲಿತ ಹಕ್ಕುಗಳ ಪ್ರತಿಪಾದಕರೂ

ದೌರ್ಜನ್ಯಕ್ಕೊಳಗಾದ ದಲಿತರಿಗೆ ಶೀಘ್ರ ಮತ್ತು ಸೂಕ್ತ ರಕ್ಷಣೆ ಕೊಡುತ್ತಿದ್ದ ಕೇಂದ್ರ ವಲಯದ ಡಿ.ಐ.ಜಿ.ಯವರೇ ಸಚಿವರ ಪರಿಹಾರೋಪಾಯವನ್ನು ಬೆಂಬಲಿಸಿದ್ದಾಗ ನನಗೆ ಮಂತ್ರಿಗಳ ರಾಜಿಸೂತ್ರವನ್ನೊಪ್ಪದೇ ಬೇರೆ ದಾರಿಯಿರಲಿಲ್ಲ. ಮಂತ್ರಿಗಳ ರಾಜಿಸೂತ್ರದ ಬಗ್ಗೆ ದಲಿತ ಹಿರಿಯರು ಬಿಡಿ ಒಬ್ಬನೇ ಒಬ್ಬ ದಲಿತ ಯುವಕನೂ ಒಂದೇ ಒಂದು ಪ್ರತಿಕ್ರಿಯೆಯನ್ನು ಕೊಟ್ಟಿರಲಿಲ್ಲವೆಂಬುದು ನನಗೆ ಆಘಾತಕಾರಿಯಾದ ಸಂಗತಿಯಾಗಿತ್ತು. ನಾನು ಆ ದಿವಸ ಊರು ಬಿಟ್ಟು ಬೆಂಗಳೂರಿಗೆ ಬಂದವನು ಮತ್ತೆ ಆ ಊರಿಗೆ ಹಲವಾರು ವರ್ಷಗಳ ತನಕ ಹೆಜ್ಜೆ ಇಟ್ಟಿರಲಿಲ್ಲ.

ಆದರೂ ದಲಿತರ ಮೇಲಿನ ದೌರ್ಜನ್ಯಗಳನ್ನು ನಿಲ್ಲಿಸಲು ರೆಡ್ಡಿಯರು ಮುಂದಾಗಿರಲಿಲ್ಲ. ಸಪ್ಟೆಂಬರ್ 1ರಂದು ಒಬ್ಬ ದಲಿತ ಯುವಕನು ಪಕ್ಕದ ಊರಿಗೆ ಹೋಗುತ್ತಿರಬೇಕಾದರೆ ಅವನ ಮೇಲೆ ಹಲ್ಲೆ ನಡೆಸಿದ್ದರು. ಈ ವಿಷಯದ ಬಗ್ಗೆ ಮಾರನೇ ದಿನ ದಲಿತ ಯುವಕರ ಜೊತೆ ಕಿರಣರು ಸಮಾಜ ಕಲ್ಯಾಣ ಸಚಿವರಿಗೆ ಮನವರಿಕೆ ಮಾಡಲು ಅವರನ್ನು ಭೇಟಿಯಾದಾಗ ಅವರಿಂದ ವಿಷಯ ತಿಳಿದುಕೊಳ್ಳಲು ಕಾಯದೇ "ದಲಿತ ಯುವಕರೇ ಊರಲ್ಲಿ ಪರಿಸ್ಥಿತಿಯನ್ನು ಬಿಗಡಾಯಿಸುತ್ತಿದ್ದಾರೆ; ಕಿರಣರೇ ಇದಕ್ಕೆಲ್ಲಾ ಮೂಲ ಕಾರಣ" ಎಂದು ದೂರಿದ್ದರು. ಆಗಸ್ಟ್ 31ರಲ್ಲಿ ಡೆಕನ್ ಹೆರಾಲ್ಡ್‌ನಲ್ಲಿ ಮತ್ತು ಸಪ್ಟೆಂಬರ್ 1ರಂದು ಕನ್ನಡ ಪ್ರಭಾದಲ್ಲಿ ಪ್ರಕಟವಾದ ಸುದ್ದಿಯ ಪ್ರಕಾರ ಮಂತ್ರಿಗಳು ಕೊಟ್ಟ ಹೇಳಿಕೆಯೇನೆಂದರೆ – "ಹಂದೇನಹಳ್ಳಿಯಲ್ಲಿ ಕೋಮು ವೈಷಮ್ಯವೇ ಇರಲಿಲ್ಲ. ದಕ್ಷಿಣ ಕನ್ನಡ ಮೂಲದ ಕ್ರೈಸ್ತ ಸಮಾಜ ಕಾರ್ಯಕರ್ತನೊಬ್ಬನು ಪ್ರದರ್ಶಿಸಿದ ಬೀದಿನಾಟಕದ ಪರಿಣಾಮವಾಗಿ ಸ್ವಲ್ಪ ಮಟ್ಟದ ಪ್ರಕ್ಷುಬ್ಧ ವಾತಾವರಣ ಕೆಲಕಾಲ ಇತ್ತು. ಆದರೆ ಅದನ್ನು ನಾನು ಯಶಸ್ವಿಯಾಗಿ ಕೊನೆಗಾಣಿಸಿದ್ದೇನೆ."

ಆದರೆ ಸಪ್ಟೆಂಬರ್ 4ರಂದು ಊರ ಅಂಚಿನಲ್ಲಿರುವ ರೆಡ್ಡಿಯೊಬ್ಬರ ಮನೆಯಲ್ಲಿ ಕೆಲಸಕ್ಕೆಂದು ದಲಿತ ಯುವಕನೊಬ್ಬನನ್ನು ಕರೆದಿದ್ದರು. ಅಲ್ಲಿಗೆ ಹೋಗುತ್ತಿದ್ದಾಗ ರೆಡ್ಡಿಯರು ಅವನ ಮೇಲೆ ಹಲ್ಲೆ ನಡೆಸಿದ್ದರು. ಅದೇ ರಾತ್ರಿ 11 ಗಂಟೆ ಸುಮಾರಿಗೆ ಊರ ವಿದ್ಯುತ್ ಸಂಚಾರವನ್ನು ಹಠಾತ್ತಾನೆ ನಿಲ್ಲಿಸಿ ಸುಮಾರು 100 ಮಂದಿ ರೆಡ್ಡಿಯರು ದಲಿತರ ಮನೆಗಳ ಮೇಲೆ ಮೊದಲು ದಲಿತ ಕಾಲೊನಿಯ ಹಿಂದುಗಡೆಯಿಂದ ನಂತರ ಅದರ ಮುಂದಿನಿಂದಲೇ ಕಲ್ಲು ತೂರಾಟ ಮಾಡಲು ತೊಡಗಿದ್ದರು. ಎಚ್ಚರಗೊಂಡ ಸುಮಾರು 20 ಮಂದಿ ದಲಿತ ಯುವಕರು ಕೈಗೆ ಸಿಕ್ಕಿದ ದೊಣ್ಣೆ ಕತ್ತಿಗಳನ್ನೆತ್ತಿಕೊಂಡು ತಮ್ಮ ಮನೆ ಮುಂದೆ ಬಿದ್ದಿರುವ ಅದೇ ಕಲ್ಲುಗಳನ್ನು ಸ್ವರಕ್ಷಣೆಗೆ ರೆಡ್ಡಿ ಜನರ ಮೇಲೆ ಎಸೆಯತೊಡಗಿದ್ದರು. ಈ ಪ್ರತಿರೋಧದಿಂದ ರೆಡ್ಡಿಯರು ಹಿಂದಕ್ಕೆ ಸರಿಯಬೇಕಾಯಿತು.

ಮಾರನೇ ದಿನ ರಾತ್ರಿ ಸುಮಾರು 8 ಗಂಟೆಯಲ್ಲಿ 35 ಮಂದಿ ದಲಿತ ದಿನಗೂಲಿಗಳು ಸನಿಹದಲ್ಲಿರುವ ಅತ್ತಿಬೆಲೆಯಿಂದ ಟ್ರಕ್ಕೊಂದರಲ್ಲಿ ಮರಳುತ್ತಿದ್ದರು. ಟ್ರಕ್‌ನಿಂದ ಊರಲ್ಲಿ ಇಳಿಯುತ್ತಿರಬೇಕಾದರೆ ಸುಮಾರು 50 ರೆಡ್ಡಿಯರು ಲಾರಿ ಚಾಲಕನನ್ನು ಸುತ್ತುವರಿದು "ನಿನ್ನ ಲಾರಿ ಮತ್ತು ಜೀವದ ಆಸೆ ನಿನಗಿದ್ದರೆ ಇನ್ನು ಮುಂದೆ ದಲಿತ ಕಾರ್ಮಿಕರನ್ನು ಕರೆದು ಕೊಂಡು ಹೋಗುವುದನ್ನು ನಿಲ್ಲಿಸಬೇಕು" ಎಂದು ಅವನಿಗೆ ತಾಕೀತು ಮಾಡಿದ್ದರು.

ಸಪ್ಟೆಂಬರ್ 6ರಂದು ಸಂಜೆ ರೆಡ್ಡಿಯರು ಪುನಃ ಸ್ಥಳೀಯ ಶಾಸಕರನ್ನು ಊರಿಗೆ ಕರೆಯಿಸಿದ್ದರು. ಸಭೆಯ ಮುಂಚೆ ಕೆಲವು ರೆಡ್ಡಿ ಮುಖಂಡರು ಕೆಲ ದಲಿತ ಹಿರಿಯರನ್ನು ಕರೆಯಿಸಿ ಸಭೆಯಲ್ಲಿ ರೆಡ್ಡಿಯರ ಒತ್ತಾಯಗಳಿಗೆ ಒಪ್ಪಿಕೊಳ್ಳಬೇಕಾಗಿಯೂ ಇಲ್ಲದಿದ್ದರೆ ಇನ್ನೂ ತೀವ್ರತರವಾದ ದೌರ್ಜನ್ಯಗಳನ್ನು ಎದುರಿಸಬೇಕಾಗಿಯೂ ಕೆಲ ದಲಿತ ರುಂಡಗಳು ನೆಲಕ್ಕುರುಳುವುದನ್ನು ನೋಡಬೇಕಾಗುವುದೆಂದೂ ಬೆದರಿಕೆ ಹಾಕಿದ್ದರು. ಸಭೆಯಲ್ಲಿ 300 ಮಂದಿ ರೆಡ್ಡಿಯರ ಮಧ್ಯೆ ಕೇವಲ 20 ಮಂದಿಯಷ್ಟೇ ದಲಿತರಿದ್ದರು. ಕೆಲ ದಲಿತ ಯುವಕರು ಹಕ್ಕು, ನ್ಯಾಯಗಳ

ಪರವಾಗಿ ಮಾತಾಡಲು ಎದ್ದು ನಿಂತಾಗ ರೆಡ್ಡಿಯರಿಂದ ಪುಸಲಾಯಿಸಲ್ಪಡುತ್ತಿದ್ದ ದಲಿತ ಹಿರಿಯರು ಅವರಿಗೆ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ರೆಡ್ಡಿಯರ ಒತ್ತಾಯಗಳಿಗೆ ಮಣಿಯುವಂತೆ ಬುದ್ಧಿವಾದ ಹೇಳುತ್ತಿದ್ದರು. ಈ ಗೊಂದಲದಲ್ಲೇ ರೆಡ್ಡಿಗಳು ಮತ್ತು ಶಾಸಕರು ಸೇರಿ ಇನ್ನು ಮುಂದೆ ಎಲ್ಲರೂ ಸೌಹಾರ್ದದಿಂದ ಊರಲ್ಲಿ ಜೀವಿಸುತ್ತೇವೆಂತಲೂ ಕಿರಣರನ್ನು ಊರೊಳಗೆ ಬರಲು ಬಿಡುವುದಿಲ್ಲವೆಂತಲೂ ರಾಜಿಪತ್ರ ಬರೆಸಿಕೊಂಡಿದ್ದರು.

ಮಾನವ ಹಕ್ಕು ರಕ್ಷಣೆ ಮಾಡಬೇಕಾದವರೇ ಹೊಣೆಗೇಡಿಗಳಾಗಿದ್ದು

ಇದೇ ಸಮಯದಲ್ಲಿ ಸಪ್ಟೆಂಬರ್ 1ರಿಂದ 16ರ ವರೆಗೆ ಮಾನವ ಮತ್ತು ದಲಿತ ಹಕ್ಕುಗಳ ರಕ್ಷಣೆಗಿರುವ ಸಿ.ಆರ್.ಇ. ಸೆಲ್‌ನ ಸಮಕ್ಷಮ ನಡೆದ ವಿಷಯಗಳನ್ನೂ ಪ್ರತ್ಯೇಕವಾಗಿ ದಾಖಲಿಸುವುದು ಸೂಕ್ತ. ಸಪ್ಟೆಂಬರ್ 1ರಂದು ಬೆಳಿಗ್ಗೆ 11ಗಂಟೆಗೆ ಸಿ.ಆರ್.ಇ. ಸೆಲ್‌ನ ಡಿ.ಎಸ್.ಪಿ.ಯವರು ಕೆಲ ದಲಿತರನ್ನೂ ಕೆಲ ರೆಡ್ಡಿಗಳನ್ನೂ ನನ್ನನ್ನೂ ಅವರ ಕಛೇರಿಯಲ್ಲಿ ಹಾಜರಿರುವಂತೆ ಕರೆನೀಡಿದ್ದರು. ಸಭೆಯ ಆರಂಭದಲ್ಲಿ ಆಗಸ್ಟ್ 29ರಂದು ಹಂದೇನಹಳ್ಳಿಯಲ್ಲಿ ಸಮಾಜ ಕಲ್ಯಾಣ ಸಚಿವರ ಸಮಕ್ಷಮ ದಲಿತರು ತೋರಿಸಿದ ತಾಳ್ಮೆ ಮತ್ತು ಸಂಯಮವನ್ನು ಪ್ರಶಂಸಿದ್ದರು. ಆದರೆ ಅದೇ ಉಸಿರಿನಲ್ಲಿ ನಾವೇನಾದರೂ ಸುಳ್ಳಾಡುತ್ತಿದ್ದರೆ ಅವುಗಳ ಸತ್ಯಾಸತ್ಯತೆಯನ್ನು ಕಂಡುಹಿಡಿಯುವ ದಾರಿ ಗೊತ್ತಿದೆಯೆಂತಲೂ ಬೆದರಿಸುವ ರೀತಿಯಲ್ಲಿ ಎಚ್ಚರಿಕೆ ಕೊಟ್ಟಿದ್ದರು. ಅದಕ್ಕೆ "ನಮ್ಮಲ್ಲಿ ಮುಚ್ಚಿಡುವಂತಹದ್ದೂ ಹೆದರಿಕೊಳ್ಳುವಂತಹದ್ದೂ ಯಾವುದೂ ಇಲ್ಲ; ನಡೆದ ನಿಜ ಘಟನೆಗಳ ಬಗ್ಗೆಯೇ ನಾವು ವಿವರ ನೀಡುತ್ತೇವೆ" ಎಂದು ನಾನು ಪ್ರತಿಕ್ರಿಯೆ ಕೊಟ್ಟಿದ್ದೆ. ಆಗ ದಲಿತರು ಏಕೆ ಕಾನೂನು ಸಮ್ಮತವಲ್ಲದ ಚಟುವಟಿಕೆಗಳಲ್ಲಿ ತೊಡಗಿದ್ದಾರೆಂದು ಅವರು ಪ್ರಶ್ನಿಸಿದ್ದರು. ಅಷ್ಟರ ವರೆಗೆ ಊರಲ್ಲಿ ನಡೆದ ಎಲ್ಲಾ ಘರ್ಷಣೆಗಳಲ್ಲಿ ದಲಿತರು ವಿನಾಕಾರಣ ದೌರ್ಜನ್ಯಕ್ಕೊಳಗಾದ ಅಮಾಯಕರಾಗಿದ್ದರು; ಆದರೆ ಕೇವಲ ಒಂದೇ ಒಂದು ಸಮಯದಲ್ಲಿ ಮಾತ್ರ ತಮ್ಮ ಸ್ವರಕ್ಷಣೆಗೋಸ್ಕರ ರೆಡ್ಡಿಯರ ದೌರ್ಜನ್ಯಕ್ಕೆ ತಿರುಗೇಟು ನೀಡಿದ್ದರು ಎಂದು ನಾನು ತಕ್ಷಣ ಅವರ ತೀರ್ಮಾನವನ್ನು ಅಲ್ಲಗಳೆದಿದ್ದೆ. ಅದಕ್ಕೆ ಡಿ.ಎಸ್.ಪಿ.ಯವರು, "ಬೆಂಕಿ ಇಲ್ಲದೆ ಹೊಗೆ ಬರುವುದಿಲ್ಲ. ಊರಲ್ಲಿಯ ಈಗಿನ ಪರಿಸ್ಥಿತಿಗೆ ದಲಿತರು ಒಂದಲ್ಲಾ ಒಂದು ರೀತಿಯಲ್ಲಿ ಕಾರಣರಾಗಿರಬೇಕು" ಎಂದು ಹೇಳುತ್ತಾ, "ಜಾಗೃತಿ ಮೂಡಿಸುವುದು ಅಗತ್ಯ; ಆದರೆ ಅದು ದಲಿತರನ್ನು ತಮ್ಮ ಸಂಯಮ ಕಳೆದುಕೊಂಡು ಅರಾಜಕರನ್ನಾಗಿಸುತ್ತದೆ" ಎಂದು ಒಟ್ಟಾರೆಯಾಗಿ ದಲಿತರನ್ನು ಟೀಕಿಸುವ ಪ್ರಯತ್ನ ಮಾಡಿದ್ದರು. ಈ ರೀತಿ ಸಾರಸಗಟಾಗಿ ಜಾಗೃತಿ-ಸಂಘಟನೆ ಪ್ರಕ್ರಿಯೆಯನ್ನು ಬಣ್ಣಿಸುವುದನ್ನು ವಿರೋಧಿಸುತ್ತಾ, "ಹಂದೇನಹಳ್ಳಿಯ ದಲಿತ ಯುವಕರ ಬಗ್ಗೆ ಹೇಳುವುದಾದರೆ ಅವರು ಯಾವುದೇ ರೀತಿಯಲ್ಲಿ ರೆಡ್ಡಿಯರ ಯಾವುದೇ ದೌರ್ಜನ್ಯಗಳಿಗೆ ಪ್ರಚೋದನೆ ನೀಡಿಲ್ಲ; ಮಾತ್ರವಲ್ಲ ಅವುಗಳ ಸತ್ಯಾಸತ್ಯತೆಯನ್ನು ಕಂಡುಹಿಡಿಯುವುವಂತಹದ್ದು ನಿಮ್ಮ ಆದ್ಯ ಕರ್ತವ್ಯ" ಎಂದು ನಾನು ಬಲವಾಗಿ ಪ್ರತಿಪಾದಿಸಿದ್ದೆ.

ಡಿ.ಎಸ್.ಪಿ.ಯವರು ನಂತರ ನಮ್ಮ ಹೇಳಿಕೆಗಳನ್ನು ಪ್ರತ್ಯೇಕವಾಗಿ ಕೊಡುವಂತೆ ಹೇಳಿ ರೈಟರ್ ಒಬ್ಬರು ಅವನ್ನು ಬರೆದುಕೊಳ್ಳುವಂತೆ ಸೂಚಿಸಿದ್ದಾಗ "ಆ ರೈಟರ್ ತುಂಬಾ ನುರಿತರು; ತಪ್ಪು ಮಾಹಿತಿಕೊಡುವವರನ್ನು ಕಂಡುಹಿಡಿಯುವ ಸಾಮರ್ಥ್ಯ ಅವರಿಗಿದೆ" ಎಂದು ಹೇಳುತ್ತಾ ಪುನಃ ನಮ್ಮನ್ನು ಬೆದರಿಸಲಿಕ್ಕೆ ನೋಡಿದ್ದರು. ನಮ್ಮ ಹೇಳಿಕೆಗಳನ್ನು ಮಾತ್ರ ರೈಟರ್‌ರವರು ತೆಗೆದುಕೊಂಡಿದ್ದನ್ನು ಬಿಟ್ಟರೆ ರೆಡ್ಡಿಯರನ್ನು ಯಾವುದೇ ವಿಚಾರಣೆಗೆ ಒಳಪಡಿಸಿರಲಿಲ್ಲ ಮಾತ್ರವಲ್ಲ ಅವರಿಂದ ಯಾವುದೇ ಹೇಳಿಕೆಯನ್ನು ಬರೆದು ಕೊಡಲೂ ಕೇಳಿರಲಿಲ್ಲ. ರೈಟರ್‌ರವರು ನಮ್ಮ ಹೇಳಿಕೆ ಪಡೆದ ಮೇಲೆ ಡಿ.ಎಸ್.ಪಿ.ಯವರು ನಮ್ಮನ್ನು ಊರಿಗೆ ಮರಳುವಂತೆ ಹೇಳಿ ಅದೇ ಸಂಜೆ ಊರಿಗೆ ಬಂದು ಖುದ್ದಾಗಿ ನಿಜಸ್ಥಿತಿಯನ್ನು ಅರಿಯುವುದಾಗಿ ತಿಳಿಸಿದ್ದರು. ನಾನು

ಸಮಾಜ ಕಲ್ಯಾಣ ಮಂತ್ರಿಗಳಿಗೆ ಒಂದು ತಿಂಗಳು ಊರೊಳಗೆ ಹೋಗುವುದಿಲ್ಲವೆಂದು ಮಾತು ಕೊಟ್ಟಿದ್ದರಿಂದ ನಾನು ತನಿಖೆಗೆ ಊರಿಗೆ ಬರಲು ಅವರು ಸೂಚಿಸುವುದಾದರೆ ಅವರೇ ನನ್ನನ್ನು ಅಲ್ಲಿ ಕರೆದುಕೊಂಡು ಹೋಗುವ ಜವಾಬ್ದಾರಿ ವಹಿಸಬೇಕೆಂದು ಅವರಿಗೆ ತಿಳಿಸಿದ್ದೆ. ಅದಕ್ಕೆ ಒಪ್ಪಿ ನಾನು ಸರ್ಜಾಪುರ ಪೊಲೀಸ್ ಸ್ಟೇಷನ್‌ನಲ್ಲಿ ಸಂಜೆ 5 ಗಂಟೆಗೆ ಬರುವಂತೆ ಸೂಚಿಸಿದ್ದರು. ಅದೇ ಸಮಯಕ್ಕೆ ಡಿ.ಎಸ್.ಪಿ.ಯವರು ಅಲ್ಲಿಗೆ ಬಂದು ಬರುವ ದಾರಿಯಲ್ಲಿ ಅವರ ವಾಹನವು ಕೆಟ್ಟಿದ್ದರಿಂದ ಹಳ್ಳಿಗೆ ಹೋಗುವುದು ಸೂಕ್ತವಲ್ಲ; ಮಾರನೇ ದಿನ ಬೆಳಿಗ್ಗೆ ನಾನು ಬೆಂಗಳೂರಿನಲ್ಲಿ ಉಳಿದುಕೊಂಡಿರುವ ಜೆಜ್ವಿಟ್ ಸಂಘದ 'ಆಶೀರ್ವಾದ'ದಲ್ಲಿ ನನ್ನನ್ನು ಭೇಟಿಯಾಗಿ ನಂತರ ಹಳ್ಳಿಗೆ ತೆರಳುವುದಾಗಿ ಮಾತು ಕೊಟ್ಟಿದ್ದರು. ಆದರೆ ಮಾರನೇ ದಿನ ಅವರು ಹಳ್ಳಿಗೆ ಭೇಟಿ ಕೊಟ್ಟರೂ ಅವರ ಜೊತೆ ಬರಲು ನನ್ನನ್ನು ಕೇಳಿರಲಿಲ್ಲ ಮಾತ್ರವಲ್ಲ ನನ್ನನ್ನು ಭೇಟಿಯಾಗದೇ ಊರಿಗೆ ಹೋಗುತ್ತೇನೆಂಬುದರ ಬಗ್ಗೆ ನನಗೆ ಯಾವ ಸುಳಿವನ್ನೂ ನೀಡಿರಲಿಲ್ಲ. ಊರಿಗೆ ಹೋದ ಅವರು ಕೇವಲ ರೆಡ್ಡಿಯವರ ಜೊತೆ ಮಾತ್ರ ಬೆರೆತು ಅವರ ಮಾತು ಕೇಳುವ ಮತ್ತು ಅವರ ಜೊತೆ ಸಂಧಾನಕ್ಕೆ ಒಪ್ಪಲು ಉತ್ಸುಕರಾಗಿರುವ ಇಬ್ಬರು ದಲಿತ ಹಿರಿಯರನ್ನು ಕರೆಯಿಸಿದ್ದರು. ನಂತರ ದಲಿತ ಯುವಕರು ಅವರನ್ನು ಭೇಟಿಯಾಗಲು ಬಂದಾಗ ಅವರೊಂದಿಗೆ ಒರಟಾಗಿ ವರ್ತಿಸಿ "ನೀವೇಕೆ ಕಾಲೇಜ್‌ಗೆ ಹೋಗಿಲ್ಲ" ಎಂದು ಪ್ರಶ್ನಿಸುತ್ತಾ ಅವರನ್ನು ಹಾಗೆಯೇ ಕಳುಹಿಸಿಕೊಟ್ಟಿದ್ದರು.

ಆಗಸ್ಟ್ ನಂತರದ ಈ ಎಲ್ಲಾ ಘಟನೆಗಳನ್ನು ಮನದಲ್ಲಿಟ್ಟು ಹಂದೇನಹಳ್ಳಿಯಲ್ಲಿ ನಾನು ಕೈಗೊಂಡ ಕೆಲಸಕಾರ್ಯಗಳು, ನನ್ನ ಗುರುತು, ನನ್ನ ಜೀವನದ ಗುರಿ, ಆದರ್ಶಗಳೆಲ್ಲವನ್ನೂ ಬರೆದು ಸಿ.ಆರ್.ಇ. ಸೆಲ್‌ನ ಡಿ.ಐ.ಜಿ.ಗೆ ಮನವರಿಕೆ ಮಾಡಿಕೊಡುವುದು ಉಚಿತವೆಂದು **ಸಪ್ಟೆಂಬರ್ 16ರಂದು** ಅವರನ್ನು ಅವರ ಕಛೇರಿಯಲ್ಲಿ ಭೇಟಿಯಾಗಿ ನನ್ನ ಪತ್ರವನ್ನು ಅವರಿಗೆ ಕೊಟ್ಟಿದ್ದೆ. ನಾನು ಅವರಿಗೆ ಕೊಡುವ ಲಿಖಿತ ಹೇಳಿಕೆಯಿಂದ ಏನಾದರೂ ಪ್ರಯೋಜನವಿದೆಯೇ ಎಂದು ಪ್ರಶ್ನಿಸುತ್ತಾ ನನ್ನ ಪತ್ರವನ್ನು ಸ್ವೀಕರಿಸಲು ನಿರಾಕರಿಸಿದ್ದರು. ಅವರೊಂದಿಗಿನ ಕ್ಷಣಿಕ ಹಾಗೂ ಅವಸರದಲ್ಲಿ ನಡೆದ ಭೇಟಿಯಿಂದ ಅವರು ಸಮಾಜ ಕಲ್ಯಾಣ ಮಂತ್ರಿಗಳಿಂದ ವಿಶೇಷ ಒತ್ತಡಕ್ಕೊಳಗಾಗಿದ್ದು ಏನನ್ನೂ ಸ್ವತಂತ್ರವಾಗಿ ಮಾಡುವ ಸ್ಥಿತಿಯಲ್ಲಿರಲಿಲ್ಲ; ತಮ್ಮ ವಿಶಿಷ್ಠ ಹುದ್ದೆಯ ಜವಾಬ್ದಾರಿಯನ್ನು ನೆರವೇರಿಸಲು, ತಮ್ಮ ವೈಯಕ್ತಿಕ ನಿಲುವುಗಳು ಹಾಗೂ ಆತ್ಮಸಾಕ್ಷಿ ಪ್ರಕಾರ ನಡೆಯಲು, ಜನರಿಗೋಸ್ಕರ ತಮ್ಮ ಕರ್ತವ್ಯವನ್ನು ಪಾಲಿಸಲು ಅವರು ಅಸಹಾಯಕರಾಗಿದ್ದರು ಎಂಬುದು ಸ್ಪಷ್ಟವಾಗಿ ಗೊತ್ತಾಗುತ್ತಿತ್ತು.

ಆಗಸ್ಟ್ ಕೊನೆಯಿಂದ ಒಂದು ತಿಂಗಳು ಕಳೆದರೂ ಸಮಾಜ ಕಲ್ಯಾಣ ಮಂತ್ರಿಗಳು ತಾವು ಬಹಿರಂಗವಾಗಿ ಕೊಟ್ಟ ಮಾತನ್ನು ಉಳಿಸಿಕೊಂಡಿರಲಿಲ್ಲ. ಊರಿನ ಕೆಲ ಹಿರಿಯ ದಲಿತರು ರೆಡ್ಡಿಯರನ್ನು ಎದುರು ಹಾಕಿಕೊಳ್ಳಲು ತಯಾರಿರದೇ ನಾನು ಊರೊಳಗೆ ಬರುವುದನ್ನು ಬಯಸದಿದ್ದಿರುವುದರಿಂದ ನಾನು ವಾಯಿದೆ ಕಳೆದ ಮೇಲೆಯೂ ಹಂದೇನಹಳ್ಳಿಗೆ ಮತ್ತೆ ಕಾಲಿಟ್ಟಿರಲಿಲ್ಲ. ಹಂದೇನಹಳ್ಳಿಯಲ್ಲಿ ರೆಡ್ಡಿಯರು ದಲಿತರ ಮೇಲೆ ನಿರ್ಬಂಧಿಸಿದ ಸಾಮಾಜಿಕ ಬಹಿಷ್ಕಾರದ ನಂತರದ ಬೆಳವಣಿಗೆಗಳಲ್ಲಿ ಪಾತ್ರವಹಿಸಿದ ಹಲವಾರು ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳಲ್ಲಿ ಬೆಂಗಳೂರಿನ ಆಗಿನ ಎಸ್.ಪಿ. ಶ್ರೀಮತಿ ಪ್ರಭಾ ರಾವ್ ಒಬ್ಬರನ್ನು ಬಿಟ್ಟರೆ ಇನ್ಯಾರೂ ತಮ್ಮ ಕರ್ತವ್ಯ ನಿಷ್ಠೆಯನ್ನೂ ಹುದ್ದೆಯ ಜವಾಬ್ದಾರಿಯನ್ನೂ ಆತ್ಮ ಸಾಕ್ಷಿಯನ್ನೂ ಮೆರೆದಿರಲಿಲ್ಲ. ಇದಕ್ಕೆ ದಲಿತ ಅಧಿಕಾರಿಗಳೂ ಹೊರತಾಗಿರಲಿಲ್ಲ. ಪ್ರಭಾ ರಾವ್‌ರವರು ಸಾಮಾಜಿಕ ಬಹಿಷ್ಕಾರ ಹಾಗೂ ತದನಂತರದ ವಿವಿಧ ದೌರ್ಜನ್ಯಗಳ ಮೂಲಕಾರಣವೇನೆಂದು ತಮ್ಮ ಒಳನೋಟದಿಂದ

ಅರ್ಥೈಸಿ ತಮ್ಮ ಕಾಳಜಿಯನ್ನು ಸ್ಪಷ್ಟಪಡಿಸಿದ್ದರು. ನನಗೆ ನ್ಯಾಯವಾಗಿ ಸಿಗಬೇಕಾದ ರಕ್ಷಣೆ ಕೊಡಲು ಅವರು ಕೆಲವು ವ್ಯವಸ್ಥೆ ಮಾಡಿದಂತಿತ್ತು.

ಅಷ್ಟೇ ಅಲ್ಲದೇ ಕೆಲವು ಹಿರಿಯ ದಲಿತ ಅಧಿಕಾರಿಗಳು ನನಗೆ ಸ್ಪಂದಿಸಬಹುದೆಂದು ಅವರನ್ನು ಭೇಟಿಯಾಗಲು ನನಗೆ ಪ್ರಭಾ ರಾವ್‌ರವರು ತಿಳಿಸಿದ್ದರು. ಅದರಲ್ಲಿ ಆಗ ಬೆಂಗಳೂರಿನಲ್ಲಿ ಪೊಲೀಸ್ ಕಮಿಷನರ್ ಆಗಿದ್ದವರು ಒಬ್ಬರು. ಆದರೆ ದುರದೃಷ್ಟವಶಾತ್ ನಾನು ಅವರನ್ನು ಭೇಟಿಯಾದಾಗ ನನಗೆ ಯಾವುದೇ ರೀತಿಯಲ್ಲೂ ಸ್ಪಂದಿಸಿರಲಿಲ್ಲ. ಅವರೂ ಕೂಡಾ ರೆಡ್ಡಿಯರು ಹಬ್ಬಿಸಿದ "ನಾನು ಮತಾಂತರ ಮಾಡುತ್ತಿದ್ದುದರಿಂದ ಅವರು ನನಗೆ ವಿರೋಧ ಮಾಡಿದ್ದರು" ಎಂಬ ವದಂತಿಗಳನ್ನು ನಂಬಿದ್ದರೆಂದು ಗೊತ್ತಾಗುತ್ತಿತ್ತು.

ಗುಡ್ಡಹಟ್ಟಿಯಲ್ಲಿ ವಾಸ್ತವ್ಯ ಮತ್ತು ಜೀತಸಮಸ್ಯೆಯನ್ನೇ ಕೇಂದ್ರವಾಗಿರಿಸಿ ಜಾಗೃತಿ-ಸಂಘಟನೆ ಕಾರ್ಯ ಮುಂದುವರೆಸಿದ್ದು

ಹಳ್ಳಿಯಲ್ಲಿ ವಾಸವಾಗಿದ್ದು ಜಾಗೃತಿ-ಸಂಘಟನೆಗಳನ್ನು ಮುಂದುವರೆಸುವುದು ಸರಿ ದಾರಿಯಲ್ಲ ಎಂದು ನನಗನಿಸಿದ್ದು ನಾನು ಬೇರೆ ಮಾರ್ಗಗಳ ಹುಡುಕಾಟದಲ್ಲಿದ್ದೆ. ಆ ಸಮಯದಲ್ಲಿ ದಲಿತರೇ ಬಹುಸಂಖ್ಯಾತರಾಗಿರುವ ನೆರೆಯ ಗುಡ್ಡಹಟ್ಟಿಯ ಇಬ್ಬರು ದಲಿತ ಮುಖಂಡರು ಅವರ ಊರಿಗೆ ಬಂದು ಅವರ ಜೊತೆ ನೆಲೆಸಿ ಅವರ ಮಕ್ಕಳ ಶಿಕ್ಷಣಕ್ಕೆ ನೆರವು ಕೊಡಬೇಕೆಂದು ಮನವಿ ಮಾಡಿದ್ದರಿಂದ ಮೊದಮೊದಲು ಒಪ್ಪದಿದ್ದರೂ ಕೊನೆಗೆ ಅವರ ಊರಲ್ಲಿ ನೆಲೆಸಿ ನನ್ನ ಕಾಳಜಿಗಳಿಗೆ ಮರುಜೀವ ಕೊಡಲು ಮುಂದಾಗಿದ್ದೆ. ಆಗ ಬೆಂಗಳೂರಿನ ಕಾಲೇಜೊಂದರಲ್ಲಿ ಪಿ.ಯು.ಸಿ. ಮಾಡುತ್ತಿದ್ದ ಆ ಊರಿನವರಾದ ಗೋವಿಂದರಾಜ ಮತ್ತು ಲಕ್ಷಣ ಎಂಬ ಇಬ್ಬರು ಯುವಕರ ಜೊತೆ ಅಕ್ಟೋಬರ್ 2ರಂದು ನಾನು ಆ ಊರಿಗೆ ಹೋಗಿದ್ದೆ.

ನಾನು ಶ್ರೀಮತಿ ಪ್ರಭಾ ರಾವ್‌ರವರಿಗೆ 40 ಮಂದಿ ಜೀತದಾಳುಗಳ ಪಟ್ಟಿಯನ್ನು ಕೊಟ್ಟಾಗ ಅವರು ತೆಗೆದ ಉದ್ಗಾರ, "Now I know why they are against you." ("ನನಗೆ ಈಗ ಗೊತ್ತಾಯಿತು ಅವರು ನಿಮ್ಮ ವಿರುದ್ಧ ಏಕೆ ಇದ್ದಾರೆಂದು.") ನನ್ನ ತಲೆಯಲ್ಲಿ ರಣರಣಿಸುತ್ತಿತ್ತು. ಗುಡ್ಡಹಟ್ಟಿಯಲ್ಲಿ ಒಂದೆರಡು ವಾರ ಕಳೆಯಬೇಕಾದರೆ ಶ್ರೀಮತಿ ಪ್ರಭಾ ರಾವ್‌ರವರ ಉದ್ಗಾರ ನನ್ನ ತಲೆಯಲ್ಲಿ ಒಂದು ಯೋಚನೆಯನ್ನು ಮೂಡಿಸಿತ್ತು. ನಾನೇಕೆ ಜೀತಪದ್ಧತಿಯನ್ನೇ ಕೇಂದ್ರವಾಗಿರಿಸಿ ನನ್ನ ಜಾಗೃತಿ-ಸಂಘಟನೆ ಕನಸುಗಳನ್ನು ನನಸು ಮಾಡಬಾರದು? ಎಸ್.ಪಿ.ಯವರ ಕಾರಣದಿಂದಾಗಿ ಒಂದೇ ಊರಲ್ಲಿ 40 ಮಂದಿ ಜೀತದಾಳುಗಳಿರುವುದು ನನ್ನ ಗಮನಕ್ಕೆ ಬಂದಿತ್ತು. ಆದರೆ ಅದಕ್ಕೆ ತದ್ವಿರುದ್ಧವಾಗಿ ಕರ್ನಾಟಕ ಸರ್ಕಾರವು 1980ರಿಂದ ರಾಜ್ಯದಲ್ಲಿ ಜೀತದಾಳುಗಳೇ ಇಲ್ಲ; ರಾಜ್ಯಾದ್ಯಂತ ಜೀತಪದ್ಧತಿಯನ್ನೇ ನಾಶಮಾಡಿದ್ದೇವೆಂದು ಘೋಷಣೆ ಮಾಡುತ್ತಾ ಬಂದಿರುವುದನ್ನೂ ನಾನು ತಿಳಿದುಕೊಂಡಿದ್ದೆನು.

ಜೀತ ಪದ್ಧತಿ ರದ್ದತಿ ಕಾನೂನು 1976ರಲ್ಲಿ ಜಾರಿಗೊಂಡ ಮೇಲೆ 1978ರಿಂದ 1980ರ ತನಕ ಆಗಿನ ಮುಖ್ಯ ಮಂತ್ರಿಯವರ ಪ್ರೇರಣೆಯಿಂದ ಬೇರೆ ಯಾವ ರಾಜ್ಯದಲ್ಲೂ ಆಗಿರದ ಮಟ್ಟಿಗೆ ಜೀತದಾಳುಗಳನ್ನು ಗುರುತಿಸಿ ಬಿಡುಗಡೆಗೊಳಿಸಿ ಪುನರ್ವಸತಿಗೊಳಿಸುವ ಕೆಲಸ ಭರದಿಂದ ಸಾಗಿತ್ತು. ಇಡೀ ದೇಶದಲ್ಲಿ ಸುಮಾರು ಎರಡು ಕಾಲು ಲಕ್ಷದಷ್ಟು ಜೀತದಾಳುಗಳನ್ನು ಗುರುತಿಸಿದ್ದರೆ ಕರ್ನಾಟಕದ ಒಂದೇ ಒಂದು ರಾಜ್ಯದಲ್ಲಿ 65 ಸಾವಿರದಷ್ಟು ಜೀತದಾಳುಗಳಿಗೆ ನ್ಯಾಯ ಒದಗಿಸುವ ಕೆಲಸ ಅಷ್ಟು ಅಲ್ಪಾವಧಿಯಲ್ಲಿ ನಡೆದಿತ್ತು. ಆದರೆ ಇದರ ಪರಿಣಾಮವಾಗಿ ತದನಂತರದ ಅಧಿಕಾರಿಗಳು ಒಂದು ಪ್ರತಿಕೂಲವಾದ ತೀರ್ಮಾನಕ್ಕೆ ಬಂದಿದ್ದರು.

ಆದರೆ ವಾಸ್ತವ ಸ್ಥಿತಿಯೇ ಬೇರೆಯಾಗಿತ್ತು. ಇದನ್ನು ಸರ್ಕಾರಕ್ಕೆ ಮನವರಿಕೆ ಮಾಡಲು ಇಡೀ ಆನೇಕಲ್ ತಾಲೂಕನ್ನು ಸಂಚರಿಸಿ ಎಲ್ಲಾ ಹಳ್ಳಿಗಳಲ್ಲಿರುವ ಜೀತದಾಳುಗಳ ನಿಜ ಪರಿಸ್ಥಿತಿಗಳ ಬಗೆಗಿನ ವಾಸ್ತವಾಂಶಗಳನ್ನು ವೈಜ್ಞಾನಿಕವಾಗಿ ಕಲೆಹಾಕಿ ವಿಶ್ಲೇಷಿಸಿ ಸರ್ಕಾರದ ಮುಂದಿಟ್ಟು ಅದರ ನೇತ್ಯಾತ್ಮಕ ಧೋರಣೆಗಳನ್ನು ಸಕಾರಾತ್ಮಕವಾಗಿ ಬದಲಾಯಿಸಬೇಕೆಂಬ ತೀರ್ಮಾನಕ್ಕೆ ಬಂದಿದ್ದೆನು. ಇದರ ಬಗ್ಗೆ ನನ್ನ ಮೇಲೆ ಜವಾಬ್ದಾರಿಯಿರುವ ಜೆಜ್ವಿಟ್ ಸಂಘದ ಮೇಲಧಿಕಾರಿಗಳಿಗೆ ಮನವರಿಕೆ ಮಾಡಿ ಜೀತಕಾರ್ಯವನ್ನು ಕೈಗೆತ್ತಿಕೊಳ್ಳಲು ಅನುಮತಿ ಪಡೆದು ಗುಡ್ಡಹಟ್ಟಿಯನ್ನೇ ಕೇಂದ್ರ ಸ್ಥಾನವನ್ನಾಗಿಸಿ ಜೀತದ ಬಗ್ಗೆ ಕ್ಷೇತ್ರಕಾರ್ಯವನ್ನು ಆರಂಭಿಸಿದ್ದೆ. ಹಳ್ಳಿಗಳ ಪರಿಚಯದಲ್ಲಿ ನನಗೆ ಸಹಾಯ ಕೊಟ್ಟವರು ಗುಡ್ಡಹಟ್ಟಿಯ ನಾಯಕರಾಗಿದ್ದ ಇಬ್ಬರು ದಲಿತ ಯುವಕರು – ಶ್ರೀ ಶಂಬಪ್ಪ ಮತ್ತು ಶ್ರೀ ಮದ್ದೂರಪ್ಪರವರು, ಹಂದೇನಹಳ್ಳಿಯ ಮುನಿಯಪ್ಪರವರು, ರಾಚಮಾನಹಳ್ಳಿಯ ಮುನಿಕೃಷ್ಣರವರು ಇತ್ಯಾದಿ.

ಈ ಕ್ಷೇತ್ರಕಾರ್ಯದ ನಡುವೆ **1998ರ ಒಂದು ವರ್ಷ** ಕರ್ನಾಟಕದಲ್ಲಿ ಅದೇ ವರ್ಷ ಆರಂಭಿಸಿದ ನ್ಯಾಷನಲ್ ಲಿಟೆರೆಸಿ ಮಿಷನ್‌ನಲ್ಲಿ ನನ್ನನ್ನೇ ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದೆ. 1985ರಲ್ಲೇ ಸಿದ್ಧಪಡಿಸಿ ಪ್ರಕಟಪಡಿಸಿದ ಅರಿವಿನ ಜಾಗೃತಿ ಮತ್ತು ಸಾಕ್ಷರತೆಯ ಪುಸ್ತಿಕೆಗಳನ್ನು ಓದಿ ಮೆಚ್ಚಿಕೊಂಡಿದ್ದ ವಯಸ್ಕರ ಶಿಕ್ಷಣ ಇಲಾಖೆಯ ನಿರ್ದೇಶಕರು ನನ್ನನ್ನು ಆಹ್ವಾನಿಸಿ ನನ್ನ ವಯಸ್ಕರ ಶಿಕ್ಷಣ ಕ್ರಮಕ್ಕೆ ಮೆಚ್ಚುಗೆ ವ್ಯಕ್ತ ಪಡಿಸಿ ಅದನ್ನು ರಾಜ್ಯದಲ್ಲಿ ಅಳವಡಿಸಲಿರುವ ನ್ಯಾಷನಲ್ ಲಿಟೆರೆಸಿ ಮಿಷನ್ ಕಾರ್ಯಕ್ರಮದಲ್ಲಿ ಬಳಸುವ ಆಶ್ವಾಸನೆ ಕೊಟ್ಟು ಅದರಲ್ಲಿ ಭಾಗವಹಿಸುವಂತೆ ಕರೆ ನೀಡಿದ್ದರು. ಅದರಿಂದ ಜೀತಸಮಸ್ಯೆ ಕುರಿತ ಕ್ಷೇತ್ರಕಾರ್ಯವು ವಿಳಂಬವಾಗಿ 1989ರ ಮೊದಲಿಗೆ ಆನೇಕಲ್‌ನ ಒಟ್ಟಾರೆ 300 ಹಳ್ಳಿಗಳಿಂದ ಸುಮಾರು 700 ಮಂದಿ ಜೀತದಾಳುಗಳ ಅಂಕಿಅಂಶಗಳನ್ನು ಕ್ರೋಢೀಕರಿಸಿ ಅವುಗಳ ಒಂದು ವಿಶ್ಲೇಷಣೆಯನ್ನು ಸಿದ್ಧಪಡಿಸಿದ್ದೆ. ಅವನ್ನು ಆಗ ತಾನೇ ವಿಧಾನ ಪರಿಷತ್‌ಗೆ ನೇಮಕಗೊಂಡ ಡಾ. ಸಿದ್ದಲಿಂಗಯ್ಯರವರಿಗೆ ಕೊಟ್ಟು ಅವರು ಜೀತಸಮಸ್ಯೆಯ ಬಗ್ಗೆ ವಿಧಾನ ಪರಿಷತ್‌ನಲ್ಲಿ ಪ್ರಶ್ನೆ ಕೇಳುವಂತೆ ಅವರನ್ನು ವಿನಂತಿಸಿದ್ದೆ. ಅವರ ಪ್ರಶ್ನೆಗೆ ಆಗಿನ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಉತ್ತಮವಾಗಿ ಸ್ಪಂದಿಸಿ ಜೀತಸಮಸ್ಯೆ ಬಗ್ಗೆ ಕಾನೂನಾತ್ಮಕವಾಗಿ ಮಾಡಬೇಕಾಗಿರುವುದೆಲ್ಲವನ್ನೂ ಮಾಡುವೆನೆಂದು ಭರವಸೆ ನೀಡಿದ್ದರು.

10 ವರ್ಷ ಸ್ಥಗಿತಗೊಂಡ ಜೀತ ಕಾನೂನ್ನು ಅನುಷ್ಠಾನಗೊಳಿಸುವ ಕೆಲಸವನ್ನು **1990**ರಲ್ಲಿ ಸರ್ಕಾರವು ಆನೇಕಲ್ ತಾಲೂಕಿನಲ್ಲಿ ಪುನಃ ಎತ್ತಿಕೊಂಡಿತ್ತು. ಅದೇ ಸಮಯದಲ್ಲಿ ಜಾಗೃತಿಯ ಕೊಂಡಿಯಾಗಿರುವ ಜೀತದಾಳುಗಳ ಸಂಘಟನೆಯ ಕೆಲಸವೂ ಆನೇಕಲ್ ತಾಲೂಕಿನ ಹಳ್ಳಿಹಳ್ಳಿಗಳಲ್ಲಿ ಗುಡ್ಡಹಟ್ಟಿ, ಹಂದೇನಹಳ್ಳಿ, ರಾಚಮಾನ ಹಳ್ಳಿ, ವಣಕನ ಹಳ್ಳಿ ಮತ್ತಿತರ ಕೆಲ ಹಳ್ಳಿಗಳ ಯುವಕರ ನೆರವಿನೊಂದಿಗೆ **'ಜೀತ ವಿಮುಕ್ತ ಸಂಘಟನೆ ಆನೇಕಲ್'** ಹೆಸರಿನಡಿ ಆರಂಭವಾಯಿತು.

ಜೀತ ಸಮಸ್ಯೆ ಕುರಿತಾದ ಕಾರ್ಯವನ್ನು ರಾಜ್ಯಾದ್ಯಂತ ವಿಸ್ತರಿಸುವ ಹಂಬಲ

ಆದರೆ ರಾಜ್ಯಮಟ್ಟದಲ್ಲಿ ಸರ್ಕಾರವು ಜೀತಕಾನೂನಿನ ಅನುಷ್ಠಾನದ ಕೆಲಸವನ್ನು ಎತ್ತಿಕೊಳ್ಳಬೇಕಾದರೆ ಸಂಘಟನೆಯನ್ನು ವಿಸ್ತರಿಸುವ ಅನಿವಾರ್ಯತೆಯನ್ನು ಕಂಡುಕೊಂಡಿದ್ದೆ. 1975ರಲ್ಲಿ ಹುಟ್ಟಿಕೊಂಡು ಆಗಾಗಲೇ ಕರ್ನಾಟಕದ ಹಳ್ಳಿಗಳಲ್ಲಿ ಹಬ್ಬಿ ದೇಶದಲ್ಲೇ ವಿಶಿಷ್ಠ ಮತ್ತು ಪ್ರಬಲ ದಲಿತ ಸಂಘಟನೆಯಾಗಿ ರೂಪುಗೊಂಡಿದ್ದ ಕರ್ನಾಟಕ ದಲಿತ ಸಂಘರ್ಷ ಸಮಿತಿ ವತಿಯಿಂದಲೇ ಜೀತನಿರ್ಮೂನೆ ಕೆಲಸ ನಡೆದರೆ ಪರಿಣಾಮಕಾರಿಯಾಗುತ್ತದೆ ಎನ್ನುವ ಚಿಂತನೆ ನನ್ನಲ್ಲಿ ನಡೆಯುತ್ತಿತ್ತು. ಮೂಲ ದಲಿತ ಸಂಘರ್ಷ ಸಮಿತಿಯ ಬೆಂಗಳೂರಿನ ಮುಖಂಡರು

ಮತ್ತು ಅದರಿಂದ ಪ್ರತ್ಯೇಕಗೊಂಡು ಸಮತಾ ಸೈನಿಕ ದಳವಾಗಿ ರೂಪು ಪಡೆದ ಇನ್ನೊಂದು ದಲಿತ ಸಂಘಟನೆಯ ಮುಖಂಡರ ಜೊತೆ ನನ್ನ ಚಿಂತನೆ–ಅಭಿಲಾಷೆಗಳ್ನು ಹಂಚಿಕೊಂಡು ದಲಿತ ಸಂಘಟನೆಗಳು ಇಡೀ ರಾಜ್ಯಾದ್ಯಂತ ಜೀತ ಸಮಸ್ಯೆಯನ್ನು ಎತ್ತಿಕೊಳ್ಳಬೇಕೆಂತಲೂ, ಅದಕ್ಕೆ ನನ್ನ ಎಲ್ಲಾ ಶ್ರಮವನ್ನು ಅವುಗಳ ನೇತೃತ್ವದಲ್ಲಿ ವಿನಿಯೋಗಿಸುವೆನೆಂತಲೂ ಕೇಳಿಕೊಂಡಿದ್ದೆ. ನನ್ನ ವಿಚಾರಗಳಿಗೆ ಸಹಾನುಭೂತಿಯನ್ನು ಎರಡೂ ಸಂಘಟನೆಗಳ ಮುಖಂಡರು ವ್ಯಕ್ತಪಡಿಸಿ ಸಂಘಟನೆಗಳಲ್ಲಿ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳುವೆವೆಂದು ಆಶ್ವಾಸನೆ ನೀಡಿದ್ದರೂ ಅವರ ಅಂತಿಮ ತೀರ್ಮಾನವನ್ನು ನನಗೆ ತಿಳಿಸಲೇ ಇರಲಿಲ್ಲ.

ರಾಜ್ಯ ಮಟ್ಟದಲ್ಲಿ ಜೀತಸಮಸ್ಯೆಯನ್ನು ಎತ್ತಿಕೊಳ್ಳುವ ನಂತರದ ಪ್ರಯತ್ನವನ್ನು ಕರ್ನಾಟಕದಲ್ಲಿ ಒಂದೆರಡು ವರ್ಷಗಳ ಹಿಂದೆ ಹುಟ್ಟಿಕೊಂಡ ಕರ್ನಾಟಕ ಸ್ವಯಂಸೇವಾ ಸಂಸ್ಥೆಗಳ ಒಕ್ಕೂಟ (ಫೆವಾರ್ಡ್–ಕೆ.)ಗಳ ಮೂಲಕ ಮಾಡಲು ಯತ್ನಿಸಿದ್ದೆ. ಅದರಲ್ಲಿ ರಾಜ್ಯದಲ್ಲಿರುವ ಸುಮಾರು 150 ಸ್ವಯಂ ಸೇವಾ ಸಂಸ್ಥೆಗಳು ಸದಸ್ಯತ್ವವನ್ನು ಪಡೆದಿದ್ದವು. ನಾನು ಪ್ರಾರಂಭದಿಂದಲೇ ಅದರ ಸದಸ್ಯನಾಗಿರದಿದ್ದರೂ ಆನೇಕಲ್‌ಗೆ ಬಂದ ಸ್ವಲ್ಪ ಸಮಯದ ನಂತರ ಅದರ ಸಕ್ರಿಯ ಸದಸ್ಯನಾಗಿದ್ದೆ. ಮಹಾರಾಷ್ಟ್ರದಲ್ಲಿರುವ ಇಜಿಎ (ಎಮ್ಪ್ಲೊಯ್ಮೆಂಟ್ ಗ್ಯಾರಂಟಿ ಕಾನೂನು) ತರಹದ ಅಧಿನಿಯಮವನ್ನು ಕರ್ನಾಟಕದಲ್ಲಿ ತರುವಂತೆ ಒತ್ತಾಯಿಸುವ ಉಪಸಮಿತಿಯ ಭಾಗವಾಗಿದ್ದೆ. ಜೀತ ಸಮಸ್ಯೆಯನ್ನು ಎತ್ತಿಕೊಳ್ಳಲು ಆ ಒಕ್ಕೂಟವನ್ನು ಒತ್ತಾಯಿಸಿದ್ದೆ. ಅದರ ಪರಿಣಾಮವಾಗಿ ಅದರಡಿ ಜೀತ ಸಮಸ್ಯೆ ಕುರಿತು ಒಂದು ಉಪಸಮಿತಿಯನ್ನು ನನ್ನ ನೇತೃತ್ವದಲ್ಲಿ ರಚಿಸಲಾಗಿತ್ತು. ಜೀತ ಸಮಸ್ಯೆಯನ್ನು ಎತ್ತಿಕೊಳ್ಳಲು ಮೊದಲು ಎಲ್ಲಾ ಸದಸ್ಯರು ಸಹಮತಿ ತೋರಿಸಿದ್ದರೂ ಮುಂದಿನ ಸಭೆಗಳಿಗೆ ಒಂದೆರಡು ಸಂಸ್ಥೆಗಳ ಪ್ರತಿನಿಧಿಗಳು ಬಿಟ್ಟರೆ ಬೇರೆ ಯಾವ ಸದಸ್ಯ ಸಂಸ್ಥೆಯೂ ಆಸಕ್ತಿಯನ್ನು ತೋರಿಸಿರಲಿಲ್ಲ. ಇದರಿಂದ ಸ್ವಯಂ ಸೇವಾ ಸಂಸ್ಥೆಗಳ ನಿಜ ರೂಪ ನನಗೆ ಮನದಟ್ಟಾಗಿತ್ತು. ಆಗಿನ ಮಟ್ಟಿಗೆ ಹೇಳುವುದಾದರೆ ಸ್ವಯಂ ಸೇವಾ ಸಂಸ್ಥೆಗಳ ನಾಯಕತ್ವ ಬಹುತೇಕ ದಲಿತೇತರಲ್ಲಿಯೇ ಇತ್ತು; ದಲಿತ ನಾಯಕತ್ವ ಅವುಗಳಲ್ಲಿ ನಗಣ್ಯವಾಗಿತ್ತು. ಅವೆಲ್ಲವೂ ದಲಿತ ಮತ್ತು ಮೂಲನಿವಾಸಿಗಳ ಕುರಿತಾಗಿಯೇ ಹೆಚ್ಚಿನ ಮಟ್ಟಿಗೆ ಕೆಲಸ ಮಾಡುತ್ತೇವೆಂದು ಹೇಳಿಕೊಂಡರೂ ಅವ್ಯಾವುವೂ ಅವರ ಸಮಸ್ಯೆಗಳಿಗೆ ಸ್ಪಂದಿಸುತ್ತಿಲ್ಲವೆಂಬುದು ನನಗೆ ಸ್ಪಷ್ಟವಾಗುತ್ತಿತ್ತು.

ಆನೇಕಲ್ ತಾಲೂಕಿನ "ಜೀತ ವಿಮುಕ್ತ ಸಂಘಟನೆ" ರಾಜ್ಯಮಟ್ಟದ "ಜೀತ ವಿಮುಕ್ತಿ ಕರ್ನಾಟಕ–ಜೀವಿಕ"ವಾಗಿ ಪರಿವರ್ತಿತವಾಗಿದ್ದು

1992 ಮಾರ್ಚ್ ತಿಂಗಳಲ್ಲಿ ನಾನು ಅನುಭವಿಸಿದ್ದ ಭೀಕರ ಕಾಯಿಲೆಯೊಂದರ ಪರಿಣಾಮವಾಗಿ ಜೆಜ್ವಿಟ್ ಸಭೆಯು ಆನೇಕಲ್‌ನಿಂದ ನನ್ನ ವಾಸ್ತವ್ಯವನ್ನು ಬೆಂಗಳೂರಿಗೆ ಬದಲಾಯಿಸುವ ಸೂಚನೆಯನ್ನು **1993ರ ಆರಂಭದಲ್ಲಿ** ನಾನು ಒಪ್ಪಿಕೊಳ್ಳಬೇಕಾಯಿತು. ಬೆಂಗಳೂರಿನಲ್ಲಿದ್ದು ರಾಜ್ಯ ಮಟ್ಟದಲ್ಲಿ ಜೀತಸಮಸ್ಯೆಯನ್ನು ಎತ್ತಿಕೊಳ್ಳುವ ಬೇರೊಂದು ಮಾರ್ಗವನ್ನು ಹುಡುಕುವ ಪ್ರಯತ್ನ ನಾನು ಮಾಡಿದ್ದೆ. ನನ್ನ ಪರಿಚಯದ ಸಮಾಜ ಕಾರ್ಯಕರ್ತರು, ಸಂಸ್ಥೆಗಳು ಮತ್ತು ಸಂಘಟನೆಗಳ ಮುಖಾಂತರ ನಾನೇ ಖುದ್ದಾಗಿ ರಾಜ್ಯ ಮಟ್ಟದ ವೇದಿಕೆಯನ್ನು ಕಟ್ಟಲು ಯೋಚಿಸಿದೆ. ಅದಕ್ಕೋಸ್ಕರ 1993ರ ಮಧ್ಯಭಾಗದಲ್ಲಿ ಹುಟ್ಟಿದ ವೇದಿಕೆಗೆ **'ಜೀತ ವಿಮುಕ್ತಿ ಕರ್ನಾಟಕ – ಜೀವಿಕ'– ಬಂಧನ ಮುಕ್ತ ಜೀವನ'** ಎಂದು ನಾಮಕರಣ ಮಾಡಲಾಗಿತ್ತು. ಅಲ್ಲಿಂದ ಮುಂದಿನದು ಜೀವಿಕದ ಚರಿತ್ರೆ.

1993ರಿಂದ 1995ರ ವರೆಗೆ ಕರ್ನಾಟಕದ ಆಗಿನ 175 ತಾಲೂಕುಗಳಲ್ಲಿಯ 48 ತಾಲೂಕುಗಳಲ್ಲಿ ಜೀತದಾಳುಗಳ ಸಮೀಕ್ಷೆ ಮಾಡಿ ಸುಮಾರು 20,000 ಜೀತದಾಳುಗಳನ್ನು

ಕಂಡುಹಿಡಿದು ಅವರೆಲ್ಲರಿಂದಲೂ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ, ಪುನರ್ವಸತಿಗೆ ಅರ್ಜಿ ಸಲ್ಲಿಸಿ 1995ರಲ್ಲಿ 10 ಜಿಲ್ಲೆಗಳ 20 ತಾಲೂಕುಗಳಲ್ಲಿ ಅವರನ್ನು ಜಾಗೃತರನ್ನಾಗಿಸಿ ಸಂಘಟಿಸುವ ಕೆಲಸ ಆರಂಭಿಸಲಾಗಿತ್ತು. ಜೀವಿಕಕ್ಕೆ ಬೆಂಬಲ ನೀಡಲು ಜೀತದಾಳು ಕುಟುಂಬದ ಕೆಲವು ಜೀವಿಕ ಕಾರ್ಯಕರ್ತರ ಮುಖಂಡತ್ವದಲ್ಲಿ **'ವಿಮುಕ್ತಿ ದತ್ತಿ'** ಹೆಸರಿನ ಸಾರ್ವಜನಿಕ ಸೇವೆಯ ದತ್ತಿಯನ್ನು **1996**ರಲ್ಲಿ ನೋಂದಾಯಿಸಲಾಯಿತು. ಜೀತದಾಳು ಮತ್ತು ಭೂರಹಿತ ಕೃಷಿಕಾಮಿಕರ ಮುಂದಾಳತ್ವದಲ್ಲಿ **'ಕರ್ನಾಟಕ ಜೀತದಾಳು ಮತ್ತು ಕೃಷಿಕಾರ್ಮಿಕ ಒಕ್ಕೂಟ'** ವೆಂಬ ಕಾರ್ಮಿಕ ಸಂಘಟನೆಯನ್ನು ಟ್ರೇಡ್ ಯೂನಿಯನ್ ಕಾನೂನಿನಡಿ **1997**ರಲ್ಲಿ ನೋಂದಾಯಿಸಲಾಯಿತು. 1998ರಿಂದ ಜೀತ–ಕೃಷಿಕಾರ್ಮಿಕ ಕುಟುಂಬಗಳನ್ನು ಆರ್ಥಿಕವಾಗಿ ಸಬಲೀಕರಣಗೊಳಿಸುವ ಉದ್ದೇಶದಿಂದ ಒಕ್ಕೂಟದ ಸದಸ್ಯರ ಕುಟುಂಬದಲ್ಲಿರುವ 10–15 ಮಂದಿ ಮಹಿಳೆಯರನ್ನೊಳಗೊಂಡಂತೆ ಹಳ್ಳಿಹಳ್ಳಿಗಳಲ್ಲಿ ಸ್ವಸಹಾಯ ಗುಂಪುಗಳನ್ನು ಕಟ್ಟಲಾಯಿತು. ಅವುಗಳ ಸದಸ್ಯರಿಗೆ ಸರ್ಕಾರದಿಂದ ದೊರಕಬಹುದಾದ ಆರ್ಥಿಕ ಸೌಲಭ್ಯಗಳನ್ನು ಪಡೆಯುವಂತೆಯೂ ಸಹಕರಿಸಲಾಯಿತು. ಆದರೂ ಜೀತ ಸಮಸ್ಯೆ ಕುರಿತು ಸರ್ಕಾರದ ನಿರ್ಲಕ್ಷ್ಯ, ಅಲ್ಲಗಳೆಯುವಿಕೆ ಮುಂದುವರಿದೇ ಇತ್ತು.

2000 ಇಸವಿಯಲ್ಲಿ ಬೆಳಕಿಗೆ ಬಂದ 10–15 ಕಿಲೊಗ್ರಾಂ ತೂಕದ ಕಬ್ಬಿಣದ ಸರಪಳಿಗಳಿಂದ ಎರಡೂ ಕಾಲುಗಳಿಗೆ ಬೆಸುಗೆಹಾಕಿ ಬಂಧಿಸಿಟ್ಟು ಕಲ್ಲುಕೆಲಸ ಮಾಡಿಸಲ್ಪಡುತ್ತಿದ್ದ ಐದು ಜೀತದಾಳುಗಳನ್ನೊಳಗೊಂಡ ಒಂದು ಘೋರ, ಕ್ರೂರ, ಅಮಾನುಷ ಜೀತಪ್ರಕರಣ ಸರ್ಕಾರದ ಅಸಡ್ಡೆಯನ್ನು ಪ್ರಶ್ನಿಸಿ ಅದು ಕಾರ್ಯತತ್ಪರವಾಗುವಂತೆ ಮಾಡಿತ್ತು. ಬಹುತೇಕ ಎಲ್ಲಾ ಜಿಲ್ಲೆ ತಾಲೂಕುಗಳಲ್ಲಿ ಜೀತದಾಳುಗಳನ್ನು ಗುರುತಿಸಲು ಸರ್ಕಾರವು ಜೀವಿಕದ ನೆರವನ್ನು ಪಡೆಯಿತು. ಜೀತರದ್ದತಿ ಹಕ್ಕಿನ ಜೊತೆಗೆ ಜೀತದಾಳುಗಳ ಜೀವನಕ್ಕೆ ಸಂಬಂಧಪಟ್ಟ ಎಲ್ಲಾ ಹಕ್ಕುಗಳ (ಕನಿಷ್ಠ ಹಾಗೂ ಸಮಾನ ವೇತನ, ವಸತಿ, ನೀರು, ಪಡಿತರ ಆಹಾರ, ಭೂಮಿ, ಕೆಲಸ, ಶಿಕ್ಷಣ, ಆರೋಗ್ಯ, ಮಾಹಿತಿ ಇತ್ಯಾದಿಗಳ) ರಕ್ಷಣೆಯನ್ನು ಮಾಡಲು ಜೀವಿಕವು ಮುಂದಾಯಿತು. 1995ರಲ್ಲಿ ಹಟ್ಟುಹಾಕಿದ ರಾಜ್ಯ ಮಟ್ಟದ ಕಲಾತಂಡದ ಜೊತೆಗೆ ತಾಲೂಕು ತಾಲೂಕುಗಳಲ್ಲಿಯೂ ತಮಟೆ ತಂಡಗಳನ್ನು ರಚಿಸಿ ಬೇರೆಬೇರೆ ಹಳ್ಳಿಗಳಲ್ಲಿ ಜಾಗೃತಿ ಕಾರ್ಯಕ್ರಮಗಳನ್ನು ಕೊಡುವ ಪರಂಪರೆ ಬೆಳೆಯಿತು. 1999ರಿಂದಲೇ ಗ್ರಾಮ ಪಂಚಾಯತಿ ಚುನಾವಣೆಗೆ ಒಕ್ಕೂಟ ಮತ್ತು ಸ್ವ ಸಹಾಯ ಗುಂಪುಗಳ ನಾಯಕ–ನಾಯಕಿಯರನ್ನು ನಿಲ್ಲಿಸಿ ಚುನಾಯಿತರಾಗುವ ಕೆಲಸವನ್ನು ಜೀವಿಕವು ಪ್ರಾರಂಭಿಸಿತು. ಗೆದ್ದವರಿಗೆ ಮತ್ತಿತರ ಅನುಸೂಚಿತ ಜಾತಿ, ಜನಾಂಗದ ಗ್ರಾಮ ಪಂಚಾಯತಿ ಸದಸ್ಯರಿಗೆ ಪಂಚಾಯತ್ ರಾಜ್ ಕಾನೂನಿನ ಬಗ್ಗೆ ನಿರಂತರ ತರಬೇತಿ ಕೊಡುವ ಕೆಲಸವನ್ನೂ ವ್ಯವಸ್ಥಿತವಾಗಿ ಮಾಡತೊಡಗಿತು.

ಜಾಗೃತಿ–ಸಂಘಟನೆಗಳ ಕೆಲಸ ನಡೆಯುತ್ತಿದ್ದಂತೆ ಹಲವಾರು ರೀತಿಗಳಲ್ಲಿ ರಾಜ್ಯ–ರಾಷ್ಟ್ರ ಮಟ್ಟಗಳಲ್ಲಿ ಸರ್ಕಾರದ ನೀತಿ, ಧೋರಣೆ, ಯೋಜನೆ, ಕಾನೂನು ಮಟ್ಟಗಳಲ್ಲಿಯೂ ಬದಲಾವಣೆ ಮಾಡುವ ಕೆಲಸದಲ್ಲಿಯೂ ಜೀವಿಕವು ತೊಡಗಿತು. ಕರ್ನಾಟಕ ಸರ್ಕಾರದ ಜೀತ ಕುರಿತ ಕ್ರಿಯಾಯೋಜನೆ 2008ನ್ನು ಸರ್ಕಾರದ ಆಮಂತ್ರಣದ ಮೇರೆಗೆ ಜೀವಿಕವು ರೂಪಿಸಿತ್ತು. ದೇಶದ ಜೀತ ಪದ್ಧತಿ ರದ್ದತಿ ಕಾನೂನಿನ ನಿಯಮಾವಳಿಗಳಲ್ಲಿ ಬದಲಾವಣೆ ತರಲು ನವದೆಹಲಿಯ ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯದ ಸಹಯೋಗದೊಂದಿಗೆ 2012ರಿಂದ 2014ರ ತನಕ ತೊಡಗಿ ಒಂದು ಕರಡು ನಿಯಮಾವಳಿಯನ್ನು ಕೇಂದ್ರ ಸರ್ಕಾರಕ್ಕೆ ಮತ್ತು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗಕ್ಕೆ ಜೀವಿಕವು ಸಲ್ಲಿಸಿತ್ತು. 2005ರ ಕೊನೆಯಲ್ಲಿ ಮಿಕ್ಕ ಜಿಲ್ಲೆಗಳಲ್ಲೂ ಸಂಘಟನೆಯನ್ನು ವಿಸ್ತರಿಸಿ 2013ರಿಂದ ನೆರೆಯ ಆಂಧ್ರ ಪ್ರದೇಶ, ತಮಿಳುನಾಡುಗಳಲ್ಲಿಯೂ ಜೀವಿಕವು ತನ್ನ ಕೈಚಾಚಿದೆ.

ಮುಕ್ತಾಯ

ಈ ಎಲ್ಲಾ ಬೆಳವಣಿಗೆಗಳಲ್ಲಿ ಮೊದಲಿನಿಂದ ಈ ತನಕವೂ ಕಾಣುವ ಒಂದು ಸಾಮಾನ್ಯ ಲಕ್ಷಣ ಜೀತಪದ್ಧತಿಗೂ ಜಾತಿವ್ಯವಸ್ಥೆಗೂ ಇರುವ ನಂಟು; ಯಜಮಾನರು ಎಸಗುವ ಶೋಷಣೆ, ದೌರ್ಜನ್ಯ, ಸಂವಿಧಾನ-ಕಾನೂನಿಗೆ ತೋರಿಸದ ಮರ್ಯಾದೆ, ಗೌರವ; ಅಧಿಕಾರಿಗಳ ನಿರ್ಲಕ್ಷ್ಯ, ಅಲ್ಲಗಳೆಯುವಿಕೆ, ಕಾನೂನಿನ ತಪ್ಪು ಅರ್ಥೈಸುವಿಕೆ; ಜೀತದಾಳುಗಳು, ದಲಿತರಲ್ಲಿರುವ ಕೀಳರಿಮೆ, ಹಿಂಜರಿಕೆ, ಭಯ ಇತ್ಯಾದಿ. ರಾಜ್ಯ, ರಾಷ್ಟ್ರ ಮಟ್ಟದಲ್ಲಿ ಜೀತ ನಿರ್ಮೂಲನೆಗೆ ಹೊಸ ನೀತಿ, ಧೋರಣೆ, ಯೋಜನೆ, ಆದೇಶಗಳು ಬಂದರೂ ಕ್ಷೇತ್ರಮಟ್ಟದ ಅಧಿಕಾರಿ-ಜನಪ್ರತಿನಿಧಿಗಳ ಧೋರಣೆ, ಕಾರ್ಯನೀತಿಗಳಲ್ಲಿ ದೊಡ್ಡ ಮಟ್ಟದ ಬದಲಾವಣೆ ಗೋಚರಿಸದೇ ಇರುವುದು ಇನ್ನೂ ಎದ್ದುಕಾಣುವ ಸಂಗತಿಯಾಗಿದೆ. ಕೈ ಮೇಲಿನ ಹುಣ್ಣಿನಂತೆ ಜೀತದಾಳುಗಳು ಸ್ಪಷ್ಟವಾಗಿ ಗೋಚರಿಸುತ್ತಿದ್ದರೂ ಅವರ ವಾಸ್ತವ್ಯವನ್ನು ಅಲ್ಲಗಳೆಯಲು ಹಲವಾರು ದಾರಿಗಳನ್ನು ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಈಗಲೂ ಬಳಸುತ್ತಿದ್ದಾರೆ. ಜೀತ ಪದ್ಧತಿಯು ಹೊಸಹೊಸ ರೂಪಗಳನ್ನು ಪಡೆಯುತ್ತಿದ್ದರೂ ಅದು ಇನ್ನೂ ಜೀವಂತವಿದೆ. ಅದನ್ನು ನಿರ್ನಾಮ ಮಾಡುವ ಅಗತ್ಯ ಎಂದಿನಂತೆ ಈಗಲೂ ಇದೆ. ಜಾತಿ ಪದ್ಧತಿಯ ಪಳೆಯುಳಿಕೆಯಂತೆ ಬಿಟ್ಟಿಚಾಕ್ರಿ ಪದ್ಧತಿಯೂ ಉತ್ತರ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿ ಅಲ್ಲಲ್ಲಿ ಇನ್ನೂ ಕಂಡುಬರುತ್ತಿದೆ. ಅದೂ ಜೀತವ್ಯಾಖ್ಯಾನದೊಳಗೆ ಒಳಗೊಳ್ಳಬೇಕು.

ಜಾತಿವ್ಯವಸ್ಥೆಯ ಕ್ರೂರತೆಯನ್ನು ಒಂದು ಮಟ್ಟಿಗಾದರೂ ನಿಲ್ಲಿಸಬೇಕಾದರೆ ಜೀತಪದ್ಧತಿಯನ್ನು ತಡಗಟ್ಟಲೇ ಬೇಕು. ದಲಿತರು ಮತ್ತು ಮೂಲನಿವಾಸಿಗಳ ಒಟ್ಟಾರೆ ಬದುಕಿನಲ್ಲಿ ಆಗಲೇ ಬೇಕಾದ ಬದಲಾವಣೆಯಲ್ಲಿ ಹಾಗೂ ಜಾತಿವಿನಾಶಕ್ಕೆ ಜೀತದಾಳುಗಳಿಗೆ ಸಿಗಬೇಕಾದ ನ್ಯಾಯವೂ ಮಹತ್ವದ ಪಾತ್ರ ವಹಿಸುತ್ತದೆ. ಗೋಳೀಕರಣ ಹಾಗೂ ಆಧುನಕ ಮಾಹಿತಿ ತಂತ್ರಜ್ಞಾನದಲ್ಲಿಯ ಆಸ್ಫೋಟಕ ಬೆಳವಣಿಗೆ ಜೀತ ಪದ್ಧತಿಯನ್ನು ಆಮೂಲಾಗ್ರವಾಗಿ ಇನ್ನೂ ನಾಶಗೊಳಿಸಿಲ್ಲ. ಬದಲಾಗಿ ಹಳೆಯ ಮಾದರಿಗಳ ಜೊತೆಗೆ ಇನ್ನೂ ಹೊಸ ರೀತಿಯ ಜೀತಪದ್ಧತಿಯ ರೂಪಗಳು ಬಯಲಾಗುತ್ತಿವೆ. ಆದರೂ ಜೀತ ಕಾನೂನಿನ ಜೀತಪದ್ಧತಿಯ ವ್ಯಾಖ್ಯಾನದೊಳಗೆಯೇ ಅವನ್ನು ಪರಿಗಣಿಸಬಹುದು. ಜೀತ ನಿರ್ಮೂಲನೆಯಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಳ್ಳುವ ಅನಿವಾರ್ಯತೆ ಈಗಲೂ ಇದೆ. ದಲಿತರು ಮತ್ತು ಮೂಲನಿವಾಸಿಗಳಲ್ಲಿ ಸುಮಾರು ಮಂದಿ ಮೀಸಲಾತಿಯ ಪರಿಣಾಮವಾಗಿ ಹಲವಾರು ರಂಗಗಳಲ್ಲಿ ಸಾಧನೆ ಮಾಡುತ್ತಿದ್ದರೂ ಅವರಲ್ಲಿ ಇನ್ನೂ ಹಲವಾರು ಮಂದಿಗೆ, ಅಂದರೆ ನೂರು ಮಂದಿ ದಲಿತರು-ಮೂಲನಿವಾಸಿಗಳಲ್ಲಿ 60 ರಿಂದ 70 ಮಂದಿ, ಕೂಲಿ ಮಾಡಿಯೇ ಜೀವನ ನಡೆಸುವ ಅನಿವಾರ್ಯತೆ ಇಂದಿಗೂ ಇದೆ. ಅವರಲ್ಲಿ ಸ್ವಲ್ಪ ಮಂದಿ, ಅಂದರೆ 60-70 ಮಂದಿಯಲ್ಲಿ 4-5 ಮಂದಿಯಾದರೂ, ಜೀತದ ಕ್ರೂರ ಪದ್ಧತಿಗೆ ಸಿಕ್ಕಿ ನರಳುತ್ತಿದ್ದಾರೆ. ಜೀತಕ್ಕಿರುವ, ಕೂಲಿ ಮಾಡುವ ದಲಿತರಿಗೆ, ಮೂಲನಿವಾಸಿಗಳಿಗೆ ಹಾಗೂ ಇನ್ನಿತರ ಬಡವರಿಗೆ ದುಡಿಮೆಯೇ ಅವರ ಏಕೈಕ ಆಸ್ತಿ. ದುಡಿಮೆಗೆ ನ್ಯಾಯ, ಗೌರವ ಸಿಗುವಂತಾಗುವುದೇ ಇಡೀ ದಲಿತ ಮೂಲನಿವಾಸಿ ಜನಾಂಗಗಳ ಬದುಕನ್ನು ಸುಭದ್ರಗೊಳಿಸಲಿರುವ ರಾಜಮಾರ್ಗ; ಬಡತನದ ಬೇಗೆಯನ್ನು ತಣ್ಣಗಾಗಿಸುವ ಬಲಿಷ್ಠ ಸಾಧನ.

ಜುಲೈ 13, 2017

ಕರ್ನಾಟಕ ಜೀತದಾಳು ಮತ್ತು ಕೃಷಿಕಾರ್ಮಿಕರ ಒಕ್ಕೂಟದ ಮುಖಂಡರು

ರಾಜ್ಯ ಅಧ್ಯಕ್ಷರು, ಹೆಚ್.ಸಿ. ಚೌಡಯ್ಯ, ಹೊಸಹುಡ್ಯ, ಬಾಗೇಪಲ್ಲಿ 9980981057
ರಾಜ್ಯ ಉಪಾಧ್ಯಕ್ಷರು ನರಸಿಂಹಪ್ಪ, ಎಸ್. ಗೊಲ್ಲಹಳ್ಳಿ, ಶಿಡ್ಲಘಟ್ಟ 8105846796
ರಾಜ್ಯ ಕಾರ್ಯದರ್ಶಿ, ಗೋಪಾಲಯ್ಯ, ಹಳಿಯೂರು, ಹೆಚ್.ಡಿ. ಕೋಟೆ 9902062292
ರಾಜ್ಯ ಖಜಾಂಚಿ, ಸುಧಾ, ನಾಗನಯಕನಹಳ್ಳಿ, ಆನೇಕಲ್ 9972989845
ರಾಜ್ಯ ಖಜಾಂಚಿ, ಮುತ್ತಯ್ಯ, ಗೋಪನಹಳ್ಳಿ, ಮದ್ದೂರು 9538612146
ಶಿವಲಿಂಗಯ್ಯ, ಸರಗೂರು, ಚೆನ್ನಪಟ್ಟಣ 9008274966
ಬೆಟ್ಟಸ್ವಾಮಯ್ಯ, ಕೋಂಡಳ್ಳಿ, ಮಾಗಡಿ 9742708001
ಮಂಜುಳ, ಬಾಣಗೆರೆ, ಬಂಗಾರಪೇಟೆ 9740403516
ಕೋನಪ್ಪ ಗಂಗಪ್ಪ, ಸುಬ್ಬರಾಯಪಾಳ್ಯ, ಚಿಂತಾಮಣಿ 7618776439
ಮುದ್ದಪ್ಪ, ದಪ್ಪರ್ತಿ, ಗುಡಿಬಂಡೆ 7353436283
ದ್ಯಾವಪ್ಪ, ಅಡವಿಗೊಲ್ಲವಾರಹಳ್ಳಿ, ಚಿಕ್ಕಬಳ್ಳಾಪುರ 9740676854
ಲೋಕೇಶ್, ನಂದೇಗಾನ ಹಳ್ಳಿ, ಗೌರಿಬಿದನೂರು 9036145770
ಗಂಗಾಧರಪ್ಪ, ಹುಣಸವಾಡಿ, ಮಧುಗಿರಿ 7899784938
ವೆಂಕಟೇಶ್ ತಿಪ್ಪಣ್ಣ, ಓಬಳಾಪುರ ಪಾವಗಡ, 81973064
ಪ್ರಕಾಶ ಭರಮೆತ್ರಿ, ತಿಗಡೋಳ್ಳಿ, ಬೈಲಹೊಂಗಲ 7090201493
ಬಾಬು ಕೆ., ಕೊಂಕಲ್, ಯಾದಗಿರಿ 8197149416
ಮಾರುತಿ, ಹಮ್ನಾಬಾದ್, ಬೀದರ್ 9901781598
ಮಹಾದೇವ, ನಂಜಯ್ಯನ ಕಾಲೊನ ಹೆಚ್.ಡಿ.ಕೋಟೆ, 9686332581
ಗೋಪಾಲ, ವಡ್ಡರಪಾಳ್ಯ, ಹೆಚ್.ಡಿ.ಕೋಟೆ 9632887917
ಮಲ್ಲಿಗಮ್ಮ, ಕೊಹಾಳ, ಹೆಚ್.ಡಿ.ಕೋಟೆ 9591900353
ಶಿವಣ್ಣ, ಯಲಮತ್ತೂರು, ಹೆಚ್.ಡಿ.ಕೋಟೆ 9902626069
ಚಂದ್ರು, ನರಸಿಪುರ, ಹೆಚ್.ಡಿ.ಕೋಟೆ 8105923641
ನಿಂಗಯ್ಯ, ದಡದಹಳ್ಳಿ, ಹೆಚ್.ಡಿ.ಕೋಟೆ 7026349783
ಶಿವಣ್ಣ, ದೇವಲಾಪುರ, ಹೆಚ್.ಡಿ.ಕೋಟೆ 9740598474
ಜಯಮ್ಮ, ಹಿರೆಹಳ್ಳಿ ಬಿ.ಕಾಲೊನಿ, ಹೆಚ್.ಡಿ.ಕೋಟೆ 9686335798
ಲಕ್ಷ್ಮಣ ಲಿಂಗಯ್ಯ, ಮಣಿಗೆರೆ, ಮದ್ದೂರು 8747944519
ನಾರಾಯಣ ನಾತಯ್ಯ, ತರಿಕೆರೆ ಕಾಲೊನಿ ಮದ್ದೂರು, 7026421248
ಟಿ.ಎಮ್. ಶಿವು, ತಿಪ್ಪೂರು, ಮದ್ದೂರು 8152830114
ಲಕ್ಷ್ಮಮ್ಮ, ಹೊಂಗನೂರು, ಚೆನ್ನಪಟ್ಟಣ 9591316581
ಜಯಮ್ಮ, ಅಬ್ಬೂರು, ಚೆನ್ನಪಟ್ಟಣ 9632402969
ವೆಂಕಟೇಶ ಹೊನ್ನಯ್ಯ, ಆಣಿಗೆರೆ, ಚೆನ್ನಪಟ್ಟಣ 9591654402
ಸಿದ್ದರಾಮು ಬೋರಯ್ಯ, ಎ.ವಿ. ಹಳ್ಳಿ, ಚೆನ್ನಪಟ್ಟಣ 8151850930
ದೇವರಾಜು, ಮೆಣಸಿಗನಹಳ್ಳಿ, ಚೆನ್ನಪಟ್ಟಣ 9632805832
ಉಮೇಶ, ಚಿಕ್ಕ ಹುಚ್ಚಯ್ಯ, ಚೆಕ್ಕೆರೆ, ಚೆನ್ನಪಟ್ಟಣ 7829176553
ಮುನಿಯಮ್ಮ, ಗಟ್ಟಿಪುರ, ಮಾಗಡಿ 9620718429
ಗಾಯತ್ರಮ್ಮ, ಜೋಡಗಟ್ಟೆ, ಮಾಗಡಿ 8296489926

ಬಾಲಯ್ಯ, ಕಣ್ಣೂರು, ಮಾಗಡಿ 9972569622
ಶಿವಪ್ಪ, ಸಕಲವಾರ, ಆನೇಕಲ್ 9916014427
ಅನಿತ, ಇಗ್ಲೂರು, ಆನೇಕಲ್ 8970171402
ಗಂಗಮ್ಮ, ಕ್ಯಾಸಂಬಳ್ಳಿ, ಬಂಗಾರಪೇಟೆ
ಪಾರ್ವತಮ್ಮ, ತಾತರೆಎಡ್ಡಿಹಳ್ಳಿ, ಬಂಗಾರಪೇಟೆ
ಮುನಿಶಾಮಿ, ಸುನ್ನಪ್ಪಗುಟ್ಟ, ಚಿಂತಾಮಣಿ 7618776439
ವೆಂಕಟ್ರಮಣಪ್ಪ, ತುಳುವನೂರು, ಚಿಂತಾಮಣಿ 9686430679
ಶಿವಪ್ಪ ಆಂಜಪ್ಪ, ದಂಡುಪಾಳ್ಯ, ಚಿಂತಾಮಣಿ 8904430942
ಮುನಿಕೃಷ್ಣಪ್ಪ, ಅಪ್ಪೇಗೌಡನಹಳ್ಳಿ,, ಶಿಡ್ಲಘಟ್ಟ 9535520065
ತೊಹೀದಾ ಅಫ್ರೇನ್, ಶಿಡ್ಲಘಟ್ಟ ನಗರ 8970864148
ಗುರುಮೂರ್ತಿ, ನಾಗಮಂಗಲ, ಶಿಡ್ಲಘಟ್ಟ 9241110436
ಆದಿನಾರಾಯಣ, ತಿಮ್ಮಂಪಲ್ಲಿ, ಬಾಗೇಪಲ್ಲಿ 9449958970
ಅಂಜಿನಪ್ಪ, ಮಂಗಳಮಡುಗುವಾರಿಪಲ್ಲಿ, ಬಾಗೇಪಲ್ಲಿ 9008083528
ಮಂಜುಳಮ್ಮ, ನಿಮ್ಮಕಾಯಲಪಲ್ಲಿ, ಬಾಗೇಪಲ್ಲಿ 9686049719
ಲಕ್ಷ್ಮೀನರಸಮ್ಮ, ತಿರುಮಣಿ, ಗುಡಿಬಂಡೆ 9686038195
ಮುನಿಯಪ್ಪ, ವರ್ಲಕೊಂಡ, ಗುಡಿಬಂಡೆ 9740452275
ರಾಮಪ್ಪ, ಚೌಟತಿಮ್ಮನಹಳ್ಳಿ, ಗುಡಿಬಂಡೆ 8747957879
ಗಂಗಾಧರ, ಜೋಡಿಬೊಮ್ಮೇನಹಳ್ಳಿ, ಚಿಕ್ಕಬಳ್ಳಾಪುರ 7760274799
ಹೇಮಾವತಮ್ಮ, ಶ್ರೀರಾಮಪುರ, ಚಿಕ್ಕಬಳ್ಳಾಪುರ 9141148162
ವೆಂಕಟಲಕ್ಷ್ಮಮ್ಮ, ನಿಮ್ಮಾಕುಲಕುಂಟೆ, ಚಿಕ್ಕಬಳ್ಳಾಪುರ 9743778801
ನರಸಿಂಹಮೂರ್ತಿ, ಬೊಮ್ಮಸಂದ್ರ, ಗೌರಿಬಿದನೂರು 8296319559
ಬಾಲಪ್ಪ, ಉದ್ಬೂರು, ಗೌರಿಬಿದನೂರು 9844537577
ಗಂಗಾಧರಪ್ಪ, ಚೆಂದನೂರು, ಗೌರಿಬಿದನೂರು 7829171404
ಸಂಜೀವರಾಯಪ್ಪ, ಚೆಂದನೂರು, ಗೌರಿಬಿದನೂರು
ನಾರಾಯಣಪ್ಪ, ಮಲ್ಲಸಂದ್ರ, ಗೌರಿಬಿದನೂರು 9900678114
ಅಂಜಿನಪ್ಪ, ಕಾಳೇನಹಳ್ಳಿ, ಮಧುಗಿರಿ 9731423811
ದೊಡ್ಡರಂಗಮ್ಮ, ಗೂಬಲಗುಟ್ಟೆ, ಮಧುಗಿರಿ, 9632918748
ತಿಮ್ಮಯ್ಯ, ತೋಟಮಡುಗು, ಮಧುಗಿರಿ 9741063662
ಬಾಬು ಹನುಮಂತರಾಯಪ್ಪ, ಸಿ.ಕೆ.ಪುರ, ಪಾವಗಡ
ನಾಗೇಶ್ ದುರ್ಗಪ್ಪ, ಪೊನ್ನಸಮುದ್ರ ಪಾವಗಡ
ರಾಮಾಂಜಿನಪ್ಪ ಅಂಜಿನಪ್ಪ, ಬಿ.ಕೆ.ಹಳ್ಳಿ, ಪಾವಗಡ, 7022068413
ಯಲ್ಲಪ್ಪ ಮಾದರ, ಕೊರಿಕೊಪ್ಪ, ಬೈಲಹೊಂಗಲ 7090858336
ಶಿವಪ್ಪ ಹರಿಜನ, ಚಿವಟಗುಂಡಿ, ಬೈಲಹೊಂಗಲ 8494965949
ಯಲ್ಲಪ್ಪ ಮಾದರ, ಗೋವನ ಕೊಪ್ಪ, ಬೈಲಹೊಂಗಲ 9743869940
ಶರಣಪ್ಪ. ಬಿ., ಕಂಚಗರಹಳ್ಳಿ, ಅತ್ತಿಕುಣಿ, ಯಾದಗಿರಿ 9019234269
ಮಡಿವಾಳಪ್ಪ, ವಂಕಸಾಂಬ್ರ, ಯಾದಗಿರಿ 9743559299
ನಬಿಸಾಬ್, ನಜರಪುರ, ಯಾದಗಿರಿ 9611022928

ಜೀವಿಕ ಹೋಬಳಿ ನಾಯಕ/ಕಿಯರು

ವೆಂಕಟೇಶ್, ಹೊಸಹೊಳಲು, ಹೆಚ್.ಡಿ. ಕೋಟೆ 9902621265
ಮಹೇಶ್, ಮುಳ್ಳೂರು, ಹೆಚ್.ಡಿ. ಕೋಟೆ 9686610502
ಗೋಪಾಲಯ್ಯ, ಹೆಗ್ಗನೂರು, ಹೆಚ್.ಡಿ. ಕೋಟೆ 9902026292
ವಸಂತ, ಚಿಕ್ಕನಂದಿ, ಹೆಚ್.ಡಿ. ಕೋಟೆ 7619476503
ಕೆಂಪಯ್ಯ, ಬೆಕ್ಕಳಲೆ, ಮದ್ದೂರು 9591296047
ಲೋಕೇಶ್ ಟಿ.ಕೆ., ತೈಲೂರು, ಮದ್ದೂರು 9164385127
ಗಂಗಾ, ಅಬ್ಬೂರು, ಚೆನ್ನಪಟ್ಟಣ 8971865062
ಸುಮತಿ, ಕ್ಯಾಸಂಬಳ್ಳಿ, ಬಂಗಾರಪೇಟೆ 7090547661
ರಾಮಚಂದ್ರಪ್ಪ, ಮುದುಗುಳಿ, ಬಂಗಾರಪೇಟೆ 9900301096
ರಾಮಚಂದ್ರಪ್ಪ, ಪುತ್ತೇರಿ, ಮುಳಬಾಗಿಲು 9482524639
ಸರಸ್ವತಮ್ಮ ಅಜಯ್, ಕರಿಯಪಳ್ಳಿ, 8310669113
ಚಂದ್ರಪ್ಪ ಎಂ.ಕೆ., ಮಾದಮಂಗಲ, ಚಿಂತಾಮಣಿ 9164399354
ಶಂಕರ್, ಕುಕ್ಕಲದಿನ್ನೆ, ಚಿಂತಾಮಣಿ 9538728112
ಬಾಲರಾಜು ಕೆ., ವಾರಹುಣಸೇನಹಳ್ಳಿ, ಶಿಡ್ಲಘಟ್ಟ 8182999374
ಮುನಿರಾಜು, ಭಕ್ತರಹಳ್ಳಿ, ಶಿಡ್ಲಘಟ್ಟ 9902953035
ಹೆಚ್. ಎನ್. ನಾರಾಯಣಸ್ವಾಮಿ, ಹೊಸಹುಡ್ಯ, ಬಾಗೇಪಲ್ಲಿ 9845734762
ಅಂಜಿನಪ್ಪ, ಚಂಚುರಾಯನಪಲ್ಲಿ, ಬಾಗೇಪಲ್ಲಿ 8971300670
ಆದಿನಾರಾಯಣಪ್ಪ, ಸೀತರೆಡ್ಡಿಪಲ್ಲಿ, ಬಾಗೇಪಲ್ಲಿ 9019668188
ಶಿವಣ್ಣ, ಬೋಡಿಕದಿರೇಪಲ್ಲಿ, ಬಾಗೇಪಲ್ಲಿ 9740347033
ರಾಮಾಂಜಿನೇಯ, ಹಂಪಸಂದ್ರ, ಗುಡಿಬಂಡೆ 8884994131
ಮಧು ಡಿ ಎನ್., ದೊಡ್ಡಕಿರಗಂಬಿ, ಚಿಕ್ಕಬಳ್ಳಾಪುರ 8150059547
ಕೃಷ್ಣಪ್ಪ, ಮಲ್ಲಸಂದ್ರ, ಗೌರಿಬಿದನೂರು 9972273544
ಹೆಚ್.ವಿ. ಗೋಪಿ, ಹೊಸೂರು, ಗೌರಿಬಿದನೂರು 8792577394
ಹನುಮಂತರಾಯಪ್ಪ, ನಲ್ಲೇಕಾಮನಹಳ್ಳಿ, ಮಧುಗಿರಿ 8182999368
ಮುನೇಂದ್ರ ಎನ್, ದೊಡ್ಡಮಾಲೂರು, ಮಧುಗಿರಿ 8495813410
ಲಲಿತ ಕೆ.ವಿ., ಕೋಡ್ಲಾಪುರ, ಮಧುಗಿರಿ 7899884310
ಬಾಬು, ಓಬಳಾಪುರ, ಪಾವಗಡ 9632449985
ಚಂದ್ರು ಡಿ., ಕನ್ನಮೇಡಿ, ಪಾವಗಡ 9731700778
ಫಕೀರಪ್ಪ, ಪೊನ್ನಸಮುದ್ರ, ಪಾವಗಡ 8197339114
ಪುಂಡಲಿಕ ಹಿತ್ತಲಮನಿ, ಗಜರ್ಗಿರ ಬೈಲಹೊಂಗಲ, 7026548380
ಮರಿಲಿಂಗಪ್ಪ. ಬಿ. ಗುಳುಬಾಳ, ಸುರಪುರ 9632955850
ನೀಲಪ್ಪ ಕಲ್ಲಪ್ಪ, ಹಿರೇಮಲ್ಲೂರ, ಶಿಗ್ಗಾಂವ, ಹಾವೇರಿ 9663971994
ಚಂದ್ರಕಾಂತ್, ಶಿವಗೂರು, ಚಿತ್ತಾಪುರ, ಕಲಬುರಗಿ 8722353815
ಪ್ರಭು, ಹುಮ್ನಾಬಾದ್, ಬೀದರ 9886274226
ರಾಜಶೇಖರ, ಹುಮ್ನಾಬಾದ್, ಬೀದರ 7829527202

ಜೀವಿಕ ರಾಜ್ಯ, ಜಿಲ್ಲಾ, ತಾಲೂಕು ನಾಯಕ/ಕಿಯರು

ಉಮೇಶ, ಬಿ. ನೂರಲಕುಪ್ಪೆ, ಹೆಚ್.ಡಿ. ಕೋಟೆ 9972830274
ರಾಮಸ್ವಾಮಿ, ಗುಡ್ಡಹಟ್ಟಿ, ಆನೇಕಲ್ 9448524602
ಗೋಪಾಲ್ ವಿ., ರಾಮಪಟ್ಟಣ ಚಿಕ್ಕಬಳ್ಳಾಪುರ 8105597037
ವಿಜಯಕುಮಾರಿ-ಪಾಪಮ್ಮ, ಗುಡ್ಡಹಟ್ಟಿ, ಆನೇಕಲ್ 9480709242
ರಾಮಕೃಷ್ಣ ವಿ., ಎಲ್.ಎಲ್.ಎಮ್., ಗುಡ್ಡಹಟ್ಟಿ, ಆನೇಕಲ್ 9945627512
ಬಸವರಾಜ ಹಂಚಿನಮನಿ, ಬಚ್ಚನಕೇರಿ, ಕಿತ್ತೂರ 9945974166
ಬಸವರಾಜು, ಕಟ್ಟೆಮುನಗನಹಳ್ಳಿ, ಹೆಚ್.ಡಿ. ಕೋಟೆ 9972971699
ಗಂಗಹನುಮಯ್ಯ, ಜುಟ್ಟಹಳ್ಳಿ, ಮಾಗಡಿ 9740898254
ನಾರಾಯಣಸ್ವಾಮಿ, ಬೀಚಗಾನಹಳ್ಳಿ, ಗುಡಿಬಂಡೆ 9448819297
ಹನುಮಂತು, ಪಿ. ನಾಗೇನ ಹಳ್ಳಿ, ಗೌರಿಬಿದನೂರು 9880789287
ರುದ್ರಪ್ಪ ಮುಂದಿನಮನಿ, ಗರ್ಜೂರ, ಬೈಲಹೊಂಗಲ 9611211458
ಹನುಮಂತರಾಯಪ್ಪ ಆರ್., ಎಲ್.ಎಲ್.ಎಮ್., ಗೌರಿಬಿದನೂರು 9902961705
ನಾಗಮ್ಮ, ಹೊಸಹೊಳಲು, ಹೆಚ್.ಡಿ. ಕೋಟೆ 9663192178
ಅಮರಾವತಿ, ಬ್ರಾಹ್ಮಣರಹಳ್ಳಿ, ಗುಡಿಬಂಡೆ 8762449026
ರತ್ನಮ್ಮ, ರಾಮಪಟ್ಟಣ, ಚಿಕ್ಕಬಳ್ಳಾಪುರ 8105597072
ಶಿವರಾಜು, ಹೆಚ್.ಮಟಕೆರೆ, ಹೆಚ್.ಡಿ. ಕೋಟೆ 9900619285
ಸಿದ್ದಯ್ಯ, ಹುಲುವಾಡಿ, ಚೆನ್ನಪಟ್ಟಣ 9986609514
ಶೋಭಾ, ಇಚ್ಚಂಗೂರು, ಆನೇಕಲ್ 9008338434
ನಾರಾಯಣಪ್ಪ, ರಾಮ ಗೋವಿಂದಪುರ, ಹೊಸಕೋಟೆ 7760989358
ಚಿಟ್ಟಮ್ಮ, ಚಿನ್ನಾಗನಹಳ್ಳಿ, ಬಂಗಾರಪೇಟೆ 8182999325
ರವಿಂದ್ರನಾಥ ಎಲ್, ನಿಮ್ಮಕಾಯಲಹಳ್ಳಿ, ಚಿಂತಾಮಣಿ 8880601885
ಸರಸ್ವತಿ, ಕರಿಯಪಲ್ಲಿ, ಚಿಂತಾಮಣಿ, 8310669113
ರವಿಕುಮಾರ್, ಗೆಜ್ಜಿಗಾನಹಳ್ಳಿ, ಶಿಡ್ಲಘಟ್ಟ 8182908886.
ಶಶಿಕಲಾ, ಗೆಜ್ಜಿಗಾನಹಳ್ಳಿ, ಶಿಡ್ಲಘಟ್ಟ 8553677949
ನಾರಾಯಣಸ್ವಾಮಿ, ಬಾಗೇಪಲ್ಲಿ ಟೌನ್, ಬಾಗೇಪಲ್ಲಿ 9980620491
ಎನ್. ಲಕ್ಷ್ಮೀ, ಬುಟ್ಟವಾರಿಪಲ್ಲಿ, ಬಾಗೇಪಲ್ಲಿ 8151913923
ಚೆನ್ನರಾಯಪ್ಪ, ಗೆಗ್ಗಿಲರಾಳ್ಳಹಳ್ಳಿ., ಗುಡಿಬಂಡೆ 9741119967
ಎನ್. ಲಕ್ಷ್ಮೀನಾರಾಯಣ, ಕುರುಬರ ಹಳ್ಳಿ, ಗೌರಿಬಿದನೂರು 9900184012
ಮಂಜುನಾಥ ಎನ್,. ರಂಟವಳಲು, ಮಧುಗಿರಿ 7026643266
ಚಿಕ್ಕಮ್ಮ ತಾಲ್ಲೂಕು, ದಬ್ಬೇಗಟ್ಟ, ಮಧುಗಿರಿ 9141399770
ನರಸಿಂಹಯ್ಯ,ಸಾರ್ವಟಪುರ, ಪಾವಗಡ 9611708675
ನಾಗಪ್ಪ ಮಾದರ, ತುರಕರ ಶೀಗಿಹಳ್ಳಿ, ಬೈಲಹೊಂಗಲ 9844896475
ಶಿವಗಂಗವ್ವ ಗಡದವರ, ಮತ್ತಿಕೊಪ್ಪ, ಬೈಲಹೊಂಗಲ 9535533840
ವೆಂಕಟಪ್ಪ .ಕೆ., ಚಂಡ್ರಿಕಿ, ಯಾದಗಿರಿ 9611715451
ಇಂದುಮತಿ, ನೌಬಾದ್, ಬೀದರ್ 9845932365
ವಿಷ್ಣು, ಬೂರಗಪಲ್ಲಿ, ಸೇಡಂ, ಕಲಬುರಗಿ 9740036967
ಅಲ್ಲಂ ಪ್ರಭು, ಕವಿತಾಳ, ಮಾನ್ವಿ, ರಾಯಚೂರು 8105997215
ಬಸವರಾಜ್ ಪೂಜಾರ್, ಕೊಪ್ಪಳ 9845674552
ಸೋಮಶೇಖರ, ಹಗರಿಬೊಮ್ಮನಹಳ್ಳಿ, ಬಳ್ಳಾರಿ 7353531367
ಅಶೋಕ ಹನುಮಂತ, ಕೋತಬಾಳ, ಸಿಂದಗಿ, ಬಿಜಾಪುರ 9880902449
ಹುಲ್ಲಪ್ಪ ಕಲ್ಲಪ್ಪ ಕರಡಿಗುಡ್ಡ, ಕಪ್ಪಲಗೇರಿ, ಬೀಳಗಿ,, ಬಾಗಲಕೋಟೆ 8762387795
ಕೃಷ್ಣಾ ಸಾಲಮನಿ, ಕುಳ್ಳೂರ, ರಾಮದುರ್ಗ, ಬೆಳಗಾವಿ 9980444780
ಪರಸಪ್ಪ ಮಂಡಮ್ಮನವರ, ಯರೆಬೇಲೆರಿ, ರೋಣ, ಗದಗ 7090038752
ಸುರೇಶ ಈರಪ್ಪ ಹರಿಜನ, ಚಿಕ್ಕಮಲ್ಲೂರು, ಶಿಗ್ಗಾಂವ, ಹಾವೇರಿ 7899340116
ಮಂಜುನಾಥ ಕರ್ಲೇಕರ, ಗುಂಡೊಳ್ಳಿ, ಹಳಿಯಾಳ, ಉತ್ತರ ಕನ್ನಡ 9845170995
ಬಿ. ಎನ್. ಚಂದ್ರಪ್ಪ, ಬೆಂಕಿಕೆರೆ, ಚನ್ನಗಿರಿ, ದಾವಣಗೆರೆ 9945559136
ರಾಜಪ್ಪ, ಕರಕೆರೆ, ಚಿತ್ರದುರ್ಗ 9449486298
ಉಮೇಶ, ಕಲದಿಪುರ, ಶಿವಮೊಗ್ಗ 9741538756
ರಾಮಸ್ವಾಮಿ, ವಗೇರ ಹಳ್ಳಿ, ಚಿಕ್ಕಮಗಳೂರು 94819952753
ಬೈರಪ್ಪ, ಸಕ್ಲೇಶಪುರ, ಹಾಸನ 9483909273
ಕುನ್ನ ಹೊಳಯಯ್ಯ, ಗುಂಡ್ಲುಪೇಟೆ, ಚಾಮರಾಜನಗರ 8105947243

ಜೀವಿಕದ ಗುರಿ ಉದ್ದೇಶಗಳು

ಸಂಘಟನಾತ್ಮಕವಾಗಿ, ಜೊತೆಕಾರ್ಯದಲ್ಲಿ ಮತ್ತು ಅಧ್ಯಯನಗಳ ಮೂಲಕ
ಜೀತ. ಬಾಲ ಕಾರ್ಮಿಕ ಪದ್ಧತಿಗಳನ್ನು ತೊಡೆದು ಹಾಕಲು
ಅವುಗಳನ್ನು ಹುಟ್ಟುಹಾಕಿರುವ ಜಾತಿ, ವರ್ಗ, ಪುರುಷ ಪ್ರಧಾನ ವ್ಯವಸ್ಥೆಗಳನ್ನು ಎದುರಿಸುತ್ತಾ
ತಮ್ಮ ಹಿತರಕ್ಷಣೆಗೆ ಸಂವಿಧಾನದತ್ತ ದುರ್ಬಲ ವರ್ಗದದವರ ಹಕ್ಕುಗಳನ್ನು* ಪಡೆಯುವುದರ ಜೊತೆಗೆ
ಸ್ವಾವಲಂಬಿ ಮತ್ತು ಸಾಮೂಹಿಕ ಪ್ರಯತ್ನಗಳನ್ನು ಬೆಳೆಸುವಲ್ಲಿ
ಪರಿಸರದ ಸದ್ಬಳಕೆ ಮತ್ತು ಸಂರಕ್ಷಣೆ ಮಾಡುತ್ತಾ
ಈಗಿನ ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ವಿಕೇಂದ್ರೀಕರಣವನ್ನು (ಪಂಚಾಯತ್ ರಾಜ್‌ಅನ್ನು)
ಬಲಗೊಳಿಸುವುದರ ಜೊತೆಗೆ
ನೇರ ಪ್ರಜಾ ಪ್ರಭುತ್ವಕ್ಕೆ ಪ್ರಯತ್ನ ಮಾಡುತ್ತಾ
ಚಿನ್ನೋಟದ ಮೂಲಕ ತಮ್ಮ ಮೌಢ್ಯಗಳನ್ನು ಪ್ರಶ್ನಿಸುತ್ತಾ
ವೈಚಾರಿಕ ಹಾಗೂ ವೈಜ್ಞಾನಿಕ ನಿಲುವುಗಳನ್ನು ಬೆಳೆಸುವುದರ ಜೊತೆಗೆ
ಸಾಂಸ್ಕೃತಿಕ ಸಮೃದ್ಧಿಯನ್ನು ಕಾಪಾಡುತ್ತಾ, ವೈವಿಧ್ಯತೆಯನ್ನು ಗೌರವಿಸುತ್ತಾ
ಬಂಧನ ಮುಕ್ತ ಜೀವನದ
ಸಮತಾ ಸಮಾಜ ಕಟ್ಟುವುದು

*ಬಲತ್ಕಾರ ದುಡಿಮೆ ನಿಷೇಧ ಹಕ್ಕು, ಬಾಲ ದುಡಿಮೆ ನಿಷೇಧ ಹಕ್ಕು, ಶಿಕ್ಷಣ ಹಕ್ಕು, ಮಾಹಿತಿ ಹಕ್ಕು, ಜೀತ ಪದ್ಧತಿ ನಿಷೇಧ ಹಕ್ಕು, ಬಾಲ ಕಾರ್ಮಿಕತೆ ನಿಷೇಧ ಹಕ್ಕು, ಕನಿಷ್ಠ ವೇತನ ಹಕ್ಕು, ಸಮಾನ ವೇತನ ಹಕ್ಕು, ಕೆಲಸದ ಹಕ್ಕು, ರಾಷ್ಟ್ರೀಯ ಗ್ರಾಮೋದ್ಯೋಗ ಖಾತ್ರಿ ಹಕ್ಕು, ಆಹಾರ (ಪಡಿತರ) ಹಕ್ಕು, ಕುಡಿಯುವ ನೀರಿನ ಹಕ್ಕು, ಭೂಮಿ ಹಕ್ಕು, ಪಂಚಾಯತ್ ರಾಜ್‌ನಲ್ಲಿ ಭಾಗವಹಿಸುವಿಕೆ ಹಕ್ಕು, ಅನುಸೂಚಿತ ಜಾತಿ-ಜನಾಂಗ ದೌರ್ಜನ್ಯ ನಿಷೇಧ ಹಕ್ಕು, ಮಹಿಳಾ ದೌರ್ಜನ್ಯ ನಿಷೇಧ ಹಕ್ಕು, ಲಿಂಗ ಸಮಾನತೆ ಮತ್ತು ನ್ಯಾಯ ಹಕ್ಕು

ಮಾರ್ಗೋಪಾಯಗಳು

ಜಾಗೃತಿಕರಣ ಮತ್ತು ತರಬೇತಿ, ಸಂಘಟನೆ ಮತ್ತು ಒಕ್ಕೂಟ ರಚನೆ, ಆಂದೋಲನ ಮತ್ತು ಸಂಘರ್ಷ, ಒತ್ತಡ ಹಾಕುವುದು ಮತ್ತು ವಕಾಲತಿ, ಜೊತೆಕಾರ್ಯ ಮತ್ತು ಮಾಧ್ಯಮಗಳ ಸದ್ಬಳಕೆ, ಅಧ್ಯಯನ, ಸಂಶೋಧನೆ ಮತ್ತು ದಾಖಲಾತಿ. ಇವುಗಳಲ್ಲೆಲ್ಲಾ ಜಾಗೃತಿಕರಣ ಮತ್ತು ಸಂಘಟನೆಗಳು ಹೆಚ್ಚಿನ ಆದ್ಯತೆ ಪಡೆದಿರುವುವು. ಗುರಿಸಾಧನೆಗೆ ಚಟುವಟಿಕೆ-ಕಾರ್ಯಕ್ರಮಗಳನ್ನು ಒಕ್ಕೂಟದ ಸದಸ್ಯರ ಸಮಾಲೋಚನೆ ಮತ್ತು ನಾಯಕತ್ವದಲ್ಲೇ ನಡೆಸಲಾಗುವುದು.

ಜೀತ ವಿಮುಕ್ತಿ
ದೇಶಕ್ಕೆ ಶಕ್ತಿ

ಸರ್ವರಿಗೂ ಸಮಪಾಲು
ಸರ್ವರಿಗೂ ಸಮಬಾಳು

ಘನತೆಯ ಕೆಲಸ
ಕೆಲಸಕ್ಕೆ ನ್ಯಾಯ

ಜೀತ ನಿರ್ಮೂಲನೆಗೆ ಜೀವಿಕದ ಜೊತೆಸೇರ ಬಯಸಿದರೆ
ಅಂತರ್ಜಾಲದ ಮುಂದಿನ ಕೊಂಡಿಯಲ್ಲಿಯ
ನಮೂನೆಯನ್ನು ಭರ್ತಿ ಮಾಡಿ ಕಳುಹಿಸಿ

- (ಕನ್ನಡದಲ್ಲಿ) https://tinyurl.com/jeevikafree
- (ಇಂಗ್ಲಿಷ್ ನಲ್ಲಿ) https://tinyurl.com/jeevikaform

#1289, ಐಸೆಕ್ ರಸ್ತೆ, ನಾಗರಭಾವಿ, ಬೆಂಗಳೂರು 560072
080-23210194, +91 9008487287, jeevika90@gmail.com
www.jeevikafree.org, Facebook: JeevikaFree